# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY








ಸಂಪುಟ:01 • ಸಂಚಿಕೆ:277 • ನೋಂದಣಿ ನಂ.:KARKAN27911 • ವಿಜಯನಗರ • 31.03.2024 • ಭಾನುವಾರ • ಪುಟ:04 • ಬೆಲೆ:2
Volume:01 • Issue:277 • Reg.No:KARKAN27911 • VIJAYANAGARA • 31.03.2024 • Sunday • Page:04 • Rs:2








## ಇಂಡಸ್ಟ್ರೀಯಲ್ ಶೆಡ್ ಸೈಟ್ ಮಾರಾಟಕ್ಕಿದೆ

ಹೊಸಪೇಟೆ ನಗರದ ಟಿ.ಬಿ.ಡ್ಯಾಂ ರಸ್ತೆ, ಶ್ರೀ ಸಾಯಿಬಾಬಾ ದೇವಸ್ಥಾನದ ಎದುರಿನ ಕೆಎಸ್ಎಸ್ಐಡಿಸಿ (KSSIDC) ಇಂಡಸ್ಟ್ರೀಯಲ್ ಪ್ರದೇಶದಲ್ಲಿರುವ ಅನ್ನಪೂರ್ಣ ಗ್ರಾನೈಟ್ ಶೆಡ್ ಹಾಗೂ ಖಾಲಿ ಜಾಗ (L-19, R-15 ) ಎರಡು ಸೈಟುಗಳ ಒಟ್ಟು ವಿಸ್ತೀರ್ಣ 10,300 ಚ.ಅಡಿ ಇದ್ದು, ಮಾರಾಟಕ್ಕಿರುತ್ತದೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ

**98441 25317**
**99861 33299**

## ಹೊಲ ಮಾರಾಟಕ್ಕಿದೆ

ಹೊಸಪೇಟೆ ತಾಲೂಕು ಮರಿಯಮ್ಮನಹಳ್ಳಿ ವ್ಯಾಪ್ತಿಯ ಡಣಾಯಕನ ಕೆರೆ ಕ್ರಾಸ್ ಬಳಿ ಕೂಡ್ಲಿಗಿ–ಹೊಸಪೇಟೆ ಎನ್.ಎಚ್ ರೋಡ್(NH ROAD) ಪಕ್ಕದಲ್ಲಿ 4 ಎಕರೆ ಹೊಲ ಮಾರಾಟಕ್ಕಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ

Contact: **94497 39665**


# ಮಾದರಿ ಜೋಡಿ ರಥಗಳ ನಿರ್ಮಾಣ

## ಭಕ್ತರಿಂದ ಭರಪೂರ ದೇಣಿಗೆ | ಉತ್ತರ ಕರ್ನಾಟಕದಲ್ಲೆ ವಿಶೇಷ ರಥಗಳಾಗಲಿವೆ
## ಜಿಲ್ಲಾಧಿಕಾರಿ ದಿವಾಕರ ಹೇಳಿಕೆ | 700 ವರ್ಷಗಳ ನಂತರ ಹೊಸ ತೇರು

■ ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ

ಉತ್ತರ ಕರ್ನಾಟಕದಲ್ಲೇ ಮಾದರಿಯಾಗುವಂತಹ ರಥಗಳ ಮರಿಯಮ್ಮನಹಳ್ಳಿಯಲ್ಲಿ ನಿರ್ಮಾಣ ವಾಗುತ್ತಿವೆ ಎಂದು ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿದರು.

ಪಟ್ಟಣದ ಆರಾಧ್ಯದೈವಗಳಾದ ಶ್ರೀಲಕ್ಷ್ಮೀ ನಾರಾಯಣಸ್ವಾಮಿ, ಶ್ರೀ ಆಂಜನೇಯಸ್ವಾಮಿಗಳ ಜೋಡಿ ರಥಗಳ ನಿರ್ಮಾಣ ಕಾಮಗಾರಿ ಪ್ರಗತಿಪರಿಶೀಲನೆ ವೀಕ್ಷಿಸಿ ಸುದ್ದಿಗಾರರೊಂದಿಗೆ ಮಾತನಾಡಿದರು. ಉತ್ತರ ಕರ್ನಾಟಕದಲ್ಲೇ ಅತಿ ಎತ್ತರವಾದ ರಥಗಳು ಇವಾಗಲಿವೆ. ಈ ರಥಗಳ ನಿರ್ಮಾಣಕ್ಕೆ ಉತ್ತರ ಕನ್ನಡದಿಂದ ಕಟ್ಟಿಗೆಗಳನ್ನು ತರಿಸಲಾಗಿದೆ.ರಾಜಸ್ತಾನದ ಕುಶಲಕರ್ಮಿಗಳಿಂದ ರಥಗಳ ಕೆತ್ತನೆಕಾರ್ಯ ನಡೆಯುತ್ತಿದೆ.ಮುಂದೆ ಈ ಭಾಗದಲ್ಲಿ ಮಾದರಿ ರಥಗಳಾಗಲಿವೆ ಎಂದರು.

ಸುಮಾರು 600–700 ವರ್ಷಗಳ ನಂತರ ಪಟ್ಟಣದಲ್ಲಿ ನೂತನರಥಗಳ ನಿರ್ಮಾಣ ವಾಗುತ್ತಿವೆ. ಇಲ್ಲಿನ ಭಕ್ತರ ಸೇವೆ ಮಾದರಿಯಾಗಿದೆ. 100ರೂ.ಗಳಿಂದ ಮೊದಲ್ಗೊಂಡು ಕೋಟ್ಯಾಂತರ ರೂಪಾಯಿಗಳ ವರೆಗೂ ರಥಗಳ ನಿರ್ಮಾಣಕ್ಕೆ ಭಕ್ತರಿಂದ ದೇಣಿಗೆಬಂದಿದೆ. ದೇಣಿಗೆ ಲೋಪವಾಗದಂತೆ ನೋಡಿಕೊಳ್ಳಲಾಗುತ್ತಿದೆ. ದೇವಸ್ಥಾನದ ಆವರಣದಲ್ಲಿ ಭಕ್ತರಿಗೆ ನೆರಳಿನಾಶ್ರಯಕ್ಕಾಗಿ ಮೇಲ್ಚಾವಣಿ ಹಾಕುವ ಕಾರ್ಯನಡೆಯುತ್ತಿದೆ. ಭಕ್ತರ ಆಪೇಕ್ಷೆಯಂತೆ ಮುಂದಿನ ಹಂತದಲ್ಲಿ ಗೋಪುರ ಕಾರ್ಯಕ್ಕೆ ರೂಪು–ರೇಷೆ ತಯಾರಿಸಲಾಗುವುದು ಎಂದರು.



ಈ ಸಂದರ್ಭದಲ್ಲಿ ಹೊಸಪೇಟೆ ತಹಶಿಲ್ದಾರ್‌ರಾದ ಶೃತಿ ಎಂ.ಎಂ. ಉಪತಹಶಿಲ್ದಾರ ಹೆಚ್.ನಾಗರಾಜ್, ಅಂದಾನಗೌಡ, ದೇವಸ್ಥಾನ ಅಭಿವೃದ್ಧಿ ಸಮಿತಿ ಅಧ್ಯಕ್ಷ ಚಿದ್ರಿಸತೀಶ, ಸಮಿತಿಯ ಗೋವಿಂದರ ಪರಶುರಾಮ, ತಳವಾರ ದೊಡ್ಡರಾಮಣ್ಣ, ಎಲೆಗಾರ ಮಂಜುನಾಥ, ಡಾ.ಈ.ಎರಿಸ್ವಾಮಿ, ಸಜ್ಜೇದವಿಶ್ವಾನಾಥ, ದೊಡ್ಡ ಮಂಜುನಾಥ ಸೇರಿದಂತೆ ಇತರರಿದ್ದರು.

# ಸಂಗನಬಸವ ಶ್ರೀಗಳ ದ್ವಿತೀಯ ಪುಣ್ಯಸ್ಮರಣೆ ವಿಶ್ವಧರ್ಮ ಪ್ರವಚನಮಂಗಲೋತ್ಸವ

■ ಹಂಪಿ ಟೈಮ್ಸ್ ಹೊಸಪೇಟೆ

ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ಮಾ.31 ರಂದು ಸಂಜೆ 7 ಕ್ಕೆ ನಗರದ ಕೊಟ್ಟೂರುಸ್ವಾಮಿ ಮಠದಲ್ಲಿ ಜಗದ್ಗುರು ಡಾ.ಸಂಗನಬಸವ ಮಹಾಸ್ವಾಮಿಗಳ ದ್ವಿತೀಯ ಪುಣ್ಯಸ್ಮರಣೋತ್ಸವ ಹಾಗೂ ವಿಶ್ವಧರ್ಮ ಪ್ರವಚನ ಮಂಗಲೋತ್ಸವ ಜರುಗಲಿದೆ. ಏ.1 ರಂದು ಸರ್ವ ಧರ್ಮ ಸಮನ್ವಯ ಮಹೋತ್ಸವ ಜರುಗಲಿದೆ ಎಂದು ಮಹೋತ್ಸವದ ಸಮಿತಿ ತಿಳಿಸಿದೆ.

ಕಮತಗಿ ಶ್ರೀ ಹೊಳೆಹುಚ್ಚೇಶ್ವರ ಸಂಸ್ಥಾನಮಠದ ಶ್ರೀ ಹುಚ್ಚೇಶ್ವರ ಮಹಾಸ್ವಾಮಿಗಳು ಸಾನ್ನಿಧ್ಯವಹಿಸುವರು. ಹೊಸಳ್ಳಿ ಶ್ರೀ ಬೂದೀಶ್ವರ ಸಂಸ್ಥಾನಮಠದ ಶ್ರೀ ಅಭಿನವ ಬೂದೀಶ್ವರ ಮಹಾಸ್ವಾಮಿಗಳು ನೇತೃತ್ವದಲ್ಲಿ ನಡೆಯಲಿದೆ. ಖೇಳಗಿ ಶ್ರೀ ಶಿವಲಿಂಗೇಶ್ವರ ಸಂಸ್ಥಾನಮಠ ಶ್ರೀ ಶಿವಲಿಂಗ ಮಹಾಸ್ವಾಮಿಗಳು ಅಧ್ಯಕ್ಷತೆವಹಿಸುವರು. ದರೂರಿನ ಶ್ರೀ ಕೊಟ್ಟೂರು ಮಹಾಸ್ವಾಮಿಗಳು, ಗರಗ–ನಾಗಲಾಪುರದ ಶ್ರೀ ನಿರಂಜನಪ್ರಭು ಮಹಾಸ್ವಾಮಿಗಳು, ಸೋಮಸಮುದ್ರದ ಸಿದ್ಧಲಿಂಗ ದೇಶಿಕರು ಉಪಸ್ಥಿತರಿರಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಎಸ್‌ಪಿ ಶ್ರೀಹರಿಬಾಬು ಬಿ.ಎಲ್. ಪಾಲ್ಗೊಳ್ಳಿದ್ದಾರೆ. ಶ್ರೀ ಜಗದ್ಗುರು ಸಂಗನಬಸವೇಶ್ವರ ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ಏ.1 ರಂದು ಸಂಜೆ 5.30ಕ್ಕೆ ಸರ್ವಧರ್ಮ ಸಮನ್ವಯ ಮಹಾರಥೋತ್ಸವದಲ್ಲಿ ಸರ್ವಧರ್ಮಗಳ ಗ್ರಂಥಗಳನ್ನು ಪ್ರತಿಷ್ಠಾಪಿಸಿದ ನಂತರ ಅನುಭವ ಮಂಟಪದ ಅಧ್ಯಕ್ಷರಾದ ಶ್ರೀ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ರಥೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಸಂಜೆ 6–30ಕ್ಕೆ ಸರ್ವಧರ್ಮ ಸಮನ್ವಯ ಮಹೋತ್ಸವ–2024 ಜರುಗಲಿದೆ. ನಂತರ ರಾಣಿ ಚನ್ನಮ್ಮ ಹಿ.ಪ್ರಾ. ಹಾಗೂ ಪ್ರೌಢ ಶಾಲೆ ವಿದ್ಯಾರ್ಥಿಘಳಿಂದ ನಾಟಕ ಪ್ರದರ್ಶನ, ಕವಿತಾ ಕಲಾತಂಡದಿಂದ ಕೌದಿ ನಾಟಕ ಪ್ರದರ್ಶನಗೊಳ್ಳಲಿದೆ ಎಂದು ಸಮಿತಿ ತಿಳಿಸಿದೆ.

## ನಿಮ್ಮ ಮತವೇ ನಿರ್ಣಾಯಕವಾದೀತು, ಮರೆಯದಿರಿ ಮತದಾನ

– ಹಂಪಿ ಟೈಮ್ಸ್ ಬಳಗ

# ಬಳ್ಳಾರಿಯಲ್ಲಿ ಪ್ರಖರ ಬಿಸಿಲು ಅನಾವಶ್ಯಕ ತಿರುಗಾಡದಿರಿ

## ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ್ ಬಾಬು ಮನವಿ

■ ಹಂಪಿ ಟೈಮ್ಸ್ ಬಳ್ಳಾರಿ

ಪ್ರಸ್ತುತ ಬೇಸಿಗೆಯಲ್ಲಿ ಜಿಲ್ಲೆಯಾದ್ಯಂತ ಮಧ್ಯಾಹ್ನ 01 ಗಂಟೆಯಿಂದ ಸಂಜೆ 04 ಗಂಟೆಯವರೆಗೆ ಪ್ರಖರವಾದ ಬಿಸಿಲು ಕಂಡುಬರುತ್ತಿರುವ ಹಿನ್ನಲೆಯಲ್ಲಿ ತಾಯಂದಿರು, ವಯೋವೃದ್ದರು ಮತ್ತು ಚಿಕ್ಕ ಮಕ್ಕಳು ಅನಾವಶ್ಯಕವಾಗಿ ಮನೆಯಿಂದ ಹೊರಗಡೆ ಬರದಂತೆ, ಮನೆಯಲ್ಲಿಯೇ ಇರಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ್ ಬಾಬು ವಿನಂತಿಸಿದ್ದಾರೆ.



ತುರ್ತು ಸಂದರ್ಭಗಳಲ್ಲಿ ಅಥವಾ ಮನೆಯಿಂದ ಹೊರಗಡೆ ಬರಬೇಕಾದ ಅನಿರ್ವಾಯತೆ ಇದ್ದಾಗ ನೀರಿನ ಬಾಟಲ್ ಹಾಗೂ ಛತ್ರಿ ಮತ್ತು ಮಕ್ಕಳಿಗೆ ಆದಷ್ಟು ತಲೆಯ ಮೇಲೆ ನೀರಿನಿಂದ ಒದ್ದೆ ಮಾಡಿದ ಬಟ್ಟೆಯನ್ನು ಹಾಕುವುದಕ್ಕೆ ಆದ್ಯತೆ ನೀಡಬೇಕು. ಆದಷ್ಟು ನೆರಳಿನಲ್ಲಿ ಇರುವಂತೆ ಗಮನ ಹರಿಸಬೇಕು. ರಾಷ್ಟ್ರೀಯ ಹವಮಾನ ಬದಲಾವಣೆ ಹಾಗೂ ಮಾನವ ಆರೋಗ್ಯ ಕಾರ್ಯಕ್ರಮದ ಅಡಿಯಲ್ಲಿ ಜಿಲ್ಲಾ ಮಟ್ಟದಲ್ಲಿ ಡಾ.ಅಬ್ದುಲ್ಲಾ ರವರ ನೇತೃತ್ವದಲ್ಲಿ ತಂಡ ರಚಿಸಿ ಕಾರ್ಯನಿರ್ವಹಿಸಲಾಗುತ್ತಿದೆ. ಅಲ್ಲದೇ ಪ್ರತಿ ದಿನ ದಿನ ಪತ್ರಿಕೆಗಳು, ರೇಡಿಯೋ, ದೂರದರ್ಶನ, ಮತ್ತು ಜಿಲ್ಲಾ ವಿಪತ್ತು ಪ್ರಾಧಿಕಾರದ ಮೂಲಕ ನೀಡುವ ಸೂಚನೆಗಳನ್ನು ತಪ್ಪದೇ ಪಾಲಿಸಬೇಕು ಎಂದು ಡಿಹೆಚ್‌ಓ ಕೋರಿದ್ದಾರೆ. ಎಲ್ಲಾ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಬೇಸಿಗೆಯಲ್ಲಿ ಬರಬಹುದಾದ ರೋಗಗಳ ಆರೈಕೆಗಾಗಿ, ಓಆರ್‌ಎಸ್, ಐವಿ ಫ್ಲೂಯಿಡ್ಸ್ ಮತ್ತು ಜೀವರಕ್ಷಕ ಔಷಧಗಳ ದಾಸ್ತಾನು ಇಟ್ಟುಕೊಳ್ಳುವಂತೆ ಹಾಗೂ ನೀರಿನ ಗುಣಮಟ್ಟದ ಪರೀಕ್ಷೆಯನ್ನು ನಿಯಮಿತವಾಗಿ ಮಾಡುವಂತೆ ಸೂಚನೆ ನೀಡಲಾಗಿದೆ ಎಂದು ಡಿಎಚ್‌ಓ ಡಾ.ವೈ.ರಮೇಶ್

### ಇವುಗಳನ್ನು ಮಾಡಬಾರದು

ಬಿಸಿಲಿನಲ್ಲಿ ಆದಷ್ಟು ಹೊರಹೊಗುವುದನ್ನು ತಪ್ಪಿಸಿ. ಮಧ್ಯಾಹ್ನದ ಸಂದರ್ಭದಲ್ಲಿ ಶ್ರಮದಾಯಕ ಹೊರಾಂಗಣ ಚಟುವಟಿಕೆಗಳನ್ನು ಕೈಗೊಳ್ಳಬಾರದು.

**ಚಪ್ಪಲಿ ಧರಿಸದೆ ಹೊರಹೋಗಬಾರದು ಮದ್ಯಪಾನ, ಟೀ, ಕಾಫಿ, ಹೆಚ್ಚು ಸಕ್ಕರೆ ಅಂಶವುಳ್ಳ ಪದಾರ್ಥಗಳನ್ನು ಸೇವಿಸಬೇಡಿ ಇವುಗಳ ಅತಿಯಾದ ಸೇವನೆಯಿಂದ ದೇಹ ನಿರ್ಜಲೀಕರಣಗೊಳ್ಳಬಹುದು ಅಥವಾ ಹೊಟ್ಟೆ ನೋವು ಕಂಡುಬರಬಹುದು.**

ಗರ್ಭಿಣಿಯರು ಆರೋಗ್ಯ ಸಮಸ್ಯೆಯಿಂದ ಬಳಲುವವರು ಮತ್ತು ನಿಗಧಿತ ಸಮಸ್ಯೆಗಳಿಗೆ ಔಷಧಿಗಳನ್ನು ತೆಗೆದುಕೊಳ್ಳುವವರು ವೈದ್ಯರ ಸಲಹೆ ಮೇರೆಗೆ ಮನೆಯ ಹೊರಗಡೆ ಕೆಲಸ ಮಾಡಲು ಆದ್ಯತೆ ನೀಡಿ.

**ಬೇಸಿಗೆಯಲ್ಲಿ ಕಲುಷಿತ ನೀರಿನ ಸೇವನೆಯಿಂದ ಸಂಭಾವ್ಯ ವಾಂತಿ–ಬೇಧಿ ಪ್ರಕರಣಗಳು ಉಂಟಾಗುವ ಹಿನ್ನಲೆಯಲ್ಲಿ ಶುದ್ಧೀಕರಿಸದೇ ಇರುವ ಅಥವಾ ಕೆರೆ, ಕುಂಟೆಗಳ ನೀರನ್ನು ನೇರವಾಗಿ ಕುಡಿಯಬೇಡಿ. ರಸ್ತೆ ಬದಿ ತೆರೆದಿಟ್ಟ ಆಹಾರ ಪದಾರ್ಥ ಮತ್ತು ಕತ್ತಿರಿಸಿಟ್ಟ ಹಣ್ಣುಗಳನ್ನು ತಿನ್ನಬಾರದು.**

### ಇವುಗಳನ್ನು ಅನುಸರಿಸಿ

**ಹೆಚ್ಚು ನೀರು ಕುಡಿಯುವುದು, ಬಾಯಾರಿಕೆ ಇಲ್ಲದಿದರೂ ಸಹ ಹೆಚ್ಚು ನೀರನ್ನು ಆಗಾಗ ಕುಡಿಯಬೇಕು.ಬಾಯಾರಿಕೆಯು ನಿರ್ಜಲೀಕರಣದ ಲಕ್ಷಣವಾಗಿದೆ.**

ಪ್ರಯಾಣ ಮಾಡುವ ಸಮಯದಲ್ಲಿ ಸಹ ಕುಡಿಯುವ ನೀರನ್ನು ಜೊತೆಗೆ ತೆಗೆದುಕೊಂಡು ಹೋಗುವುದು ಅಗತ್ಯವಾಗಿದೆ.

**ಓಆರ್‌ಎಸ್ ಜೀವಜಲವನ್ನು ಹಾಗೂ ಮನೆಯಲ್ಲಿಯೇ ಸಿದ್ದಪಡಿಸಿದ ನಿಂಬೆ ಹಣ್ಣಿನ ಶರಬತ್ತು, ಮಜ್ಜಿಗೆ, ಲಸ್ಸಿ, ಹಣ್ಣಿನ ಜ್ಯೂಸ್‌ಗಳನ್ನು ಒಂದು ಚಿಟಿಕೆ ಉಪ್ಪಿನೊಂದಿಗೆ ಸೇವಿಸುವುದು ಉತ್ತಮವಾಗಿದೆ.**

ಪ್ರಸ್ತುತ ಋತುಮಾನದ ಹಣ್ಣುಗಳಾದ ಕಲ್ಲಂಗಡಿ, ಕರ್ಬೂಜ, ಕಿತ್ತಳೆ, ದ್ರಾಕ್ಷಿ ಅನಾನಸ್ ಹಾಗೂ ಸೌತೆಕಾಯಿ, ಎಳೆನೀರು ಕಾಯಿ ಹೆಚ್ಚು ಸೇವಿಸಬೇಕು.

ತಿಳಿ ಬಿಳಿ ಬಣ್ಣದ ಸಡಿಲವಾದ ಹತ್ತಿಯ ಬಟ್ಟೆಯನ್ನು ಧರಿಸುವುದು ಉತ್ತಮ. ನಡೆಯುವಾಗ ಪಾದರಕ್ಷೆ, ಚಪ್ಪಲಿ ತಪ್ಪದೆ ಧರಿಸಬೇಕು.

### ಸಾಮಾನ್ಯ ಅಪಾಯದ ಚಿಹ್ನೆಗಳು

ವಯಸ್ಕರಲ್ಲಿ ಅರೆಪ್ರಜ್ಞಾವಸ್ಥೆ, ಪ್ರಜ್ಞೆ ತಪ್ಪುವುದು, ಸಿಡಿಮಿಡಿಗೊಳ್ಳುವುದು, ಗಾಬರಿಗೊಳ್ಳುವುದು, ಅತಿಯಾದ ತಲೆನೋವು, ಚರ್ಮವು ಬಿಸಿ ಹಾಗೂ ಕೆಂಪಾದ ಒಣಚರ್ಮ, ಆತಂಕ, ತಲೆಸುತ್ತುವಿಕೆ, ಮಾಂಸಖಂಡಗಳಲ್ಲಿ ಸುಸ್ತು ಅಥವಾ ಸೆಳೆತ, ವಾಕರಿಕೆ ಮತ್ತು ವಾಂತಿ, ಮಕ್ಕಳಲ್ಲಿ ಆಹಾರ ಸೇವಿಸಲು ನಿರಾಕರಿಸುವುದು, ಕನಿಷ್ಠ ಮೂತ್ರ ವಿಸರ್ಜನೆ, ಬಾಯಿ ಒಣಗುವಿಕೆ, ಆಲಸ್ಯ, ಮೂರ್ಛೆ ಹೋಗುವುದು, ದೇಹದ ಯಾವುದೇ ಭಾಗದಲ್ಲಿ ರಕ್ತಸ್ರಾವ ಕಂಡುಬರುತ್ತವೆ.


## Best Franchise (Dealership) Opportunity

*in the following Pin codes*

*We are an innovative company Looking for Dynamic partners who can associate with us in exploring New Digital Business for a Life time Earnings*

| Sl.no | Location/s | Pin code | Sl.no | Location/s | Pin code |
|---|---|---|---|---|---|
| 1 | Koppal | 583227 | 11 | Gingera | 583228 |
| 2 | Gangavathi | 583227 | 12 | Toranagallu | 583123 |
| 3 | Sindhanoor | 584128 | 13 | Kampli | 583132 |
| 4 | Karatagi | 583229 | 14 | Sandur | 583119 |
| 5 | Kushtagi | 583227 | 15 | Bellary | 583101 |
| 6 | Ilkal | 587125 | 16 | Hampi-Kamalapur | 583239 |
| 7 | Yelburga | 583236 | 17 | Sirguppa | 583121 |
| 8 | Kuknoor | 583232 | 18 | H.B.Halli | 583212 |
| 9 | Tavargera | 583279 | 19 | Kudligi | 583135 |
| 10 | Sri Ramnagar | 583282 | 20 | Huvinahadagali | 583219 |

To know about the Company, the Business and your association with us and Your investment in various Pin codes listed above, Please attend our Up coming Business opportunity meeting at HOSPET - Post -583201 ( Vijayanagar Dist)

**Enroll yourself with us on**
**Wattsup No.9590556566 or**
**Call. Mob.9590556566**
**for initial details, with your profile**

Date of Meeting shall be shared once your registration is complete on our Wattsup number

ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

# ಹೆಚ್ಚುತ್ತಿದೆ ಬಿಸಿಲು ಇರಲಿ ಕಾಳಜಿ



ಬೇಸಿಗೆ ಬಿಸಿಲು ದಿನೇದಿನೆ ಜೋರಾಗೇ ಏರುತ್ತಿದೆ. ಕಳೆದ ಬಾರಿ ಸಾಕಷ್ಟು ಪ್ರಮಾಣದಲ್ಲಿ ನಿರೀಕ್ಷಿತ ಮಳೆ ಆಗದಿರುವುದೇ ಇದಕ್ಕೆ ಕಾರಣ. ಸಾಮಾನ್ಯವಾಗಿ ಮಾರ್ಚ್‌ನಿಂದ ಬಿಸಿಲು ಶುರುವಾಗಿ ಏಪ್ರಿಲ್‌ನಲ್ಲಿ ಪ್ರಖರತೆಗೆ ಬರುತ್ತಿತ್ತು. ಆದರೆ, ಈ ಸಲ ಮಾರ್ಚ್‌ನಿಂದಲೇ ಬಿರುಬಿಸಿಲು ಅನುಭವವಾಗುತ್ತಿದೆ. ಕಳೆದ ಎರಡ್ಮೂರು ದಿನಗಳಿಂದ 40 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಹೆಚ್ಚಿಗೆ ದಾಖಲಾಗುತ್ತಿದೆ. ಬೆಳಗ್ಗೆ ಒಂಬತ್ತು ಗಂಟೆಗೇ ಮನೆಯಿಂದ ಹೊರಬರಲಾರದಷ್ಟು ಬಿಸಿಲು ನಮ್ಮನ್ನು ಆವರಿಸುತ್ತಿದೆ. ಒಂದೆಡೆ ಬಿಸಿಲು ಹೆಚ್ಚಾಗುತ್ತಿದ್ದರೆ ಮತ್ತೊಂದೆಡೆ ಅದೇ ಬಿಸಿಲಿನಿಂದ ಆರೋಗ್ಯದ ಮೇಲೂ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಹೆಚ್ಚುತ್ತಿರುವ ವಿಪರೀತ ತಾಪಮಾನದಿಂದ ಚರ್ಮ, ಮಿದುಳು ಜ್ವರ, ಸನ್‌ಸ್ಟ್ರೋಕ್ ಇತ್ಯಾದಿ ಬಾಧಿಸುತ್ತವೆ. 2023ಕ್ಕೆ ಹೋಲಿಸಿದರೆ ಈ ಬಾರಿ ಚರ್ಮದ ಸಮಸ್ಯೆ ಶೇ.20 ಹೆಚ್ಚಳವಾಗಿದೆ. ಚರ್ಮದ ಕಾಳಜಿ ವಹಿಸದಿದ್ದರೆ ಸನ್ ಟ್ಯಾನ್, ಚರ್ಮದ ಕಾಳಜಿ ವಹಿಸದಿದ್ದರೆ ಧೂಳಿನ ಅಲರ್ಜಿ ಮತ್ತು ಇತರೆ ಕಿರಿಕಿರಿ ಮತ್ತು ಆರೋಗ್ಯ ಸಮಸ್ಯೆಗಳು ಎದುರಾಗುತ್ತವೆ. ಬೇಸಿಗೆಯಲ್ಲಿ ದೇಹವು ಹೆಚ್ಚು ಬೆವರುವುದು ಸಾಮಾನ್ಯ, ಬಹಳಷ್ಟು ಮಂದಿಗೆ ಇದು ಸೋಂಕಾಗಿ ಬಾಧಿಸಬಹುದು. ಅತಿಯಾದ ಬೆವರುವುದರಿಂದ ದೇಹದ ಸಂದುಗಳಲ್ಲಿ ಅಲರ್ಜಿ, ತುರಿಕೆ ಶುರುವಾಗಿ ಹಿಂಸೆಯಾಗಬಹುದು. ಇದನ್ನು ಕೆರೆದರೆ ಗಂಭೀರ ಸಮಸ್ಯೆಗೂ ಕಾರಣವಾಗಬಹುದು. ಈ ಸೋಂಕು ಮಕ್ಕಳಲ್ಲಿ ಒಬ್ಬರಿಂದ ಒಬ್ಬರಿಗೆ ಬೇಗನೆ ವ್ಯಾಪಿಸುತ್ತದೆ. ಬೇಸಿಗೆ ಸಂದರ್ಭ ಸೃಷ್ಟಿಯಾಗಿರುವ ನೀರಿನ ಸಮಸ್ಯೆಯಿಂದ ಚರ್ಮದ ತೊಂದರೆಗಳು ಮತ್ತಷ್ಟು ಹೆಚ್ಚಲು ಕಾರಣವಾಗಬಹುದು. ಹೀಗಾಗಿ ದೇಹದ ಆರೋಗ್ಯದೊಂದಿಗೆ ಚರ್ಮದ ರಕ್ಷಣೆಯತ್ತಲೂ ಹೆಚ್ಚಿನ ಗಮನ ಹರಿಸಬೇಕಿದೆ. ಬಿಸಿಲಿನ ತೀವ್ರತೆ ಹಾಗೂ ವಾತಾವರಣ ಹೆಚ್ಚು ಧೂಳಿನಿಂದ ಕೂಡಿರುವ ಕಾರಣಕ್ಕೆ ಮಕ್ಕಳಲ್ಲಿ ಚಿಕನ್‌ಪಾಕ್ಸ್ ಬಂದಿರುವ ಪ್ರಕರಣಗಳು ಹೆಚ್ಚುತ್ತಿವೆ. ಇದಲ್ಲದೆ ಕೈ ಹಾಗೂ ಕಾಲುಗಳ ಬೆರಳು ಸಂದು, ಕಿವಿ ಹಿಂಭಾಗದಲ್ಲಿ ಅಲರ್ಜಿ ಕಾಣಿಸಿಕೊಳ್ಳುತ್ತಿವೆ. ಈ ನೋವಿನಿಂದ ಮಕ್ಕಳಲ್ಲಿ ಜ್ವರ ಸೇರಿದಂತೆ ಹಲವು ಆರೋಗ್ಯ ಸಮಸ್ಯೆಗಳು ಎದುರಾಗಬಹುದು. ಬೇಸಿಗೆಯಲ್ಲಿ ಕೂದಲಿನ ಸಮಸ್ಯೆಯೂ ಹೆಚ್ಚಾಗಿದೆ. ಕೂದಲ ಬುಡದಲ್ಲಿ ಬೆವರು ಅಂಟಿ ತಲೆಹೊಟ್ಟು, ತುರಿಕೆ, ಅಲರ್ಜಿ ಕಾಣಿಸಿಕೊಳ್ಳಬಹುದು. ಈ ಎಲ್ಲ ಆರೋಗ್ಯ ಸಮಸ್ಯೆಗಳಿಂದ ಪಾರಾಗಲು ಹೆಚ್ಚು ದ್ರವರೂಪದ ಆಹಾರ, ತಿಳಿಮಜ್ಜಿಗೆ, ಎಳನೀರು, ಹಣ್ಣಿನ ರಸ, ಸೌತೆಕಾಯಿ, ಕಲ್ಲಂಗಡಿ ಹಣ್ಣು, ಮೋಸಂಬಿ, ಕಿತ್ತಲೆ, ದ್ರಾಕ್ಷಿ ಹಣ್ಣುಗಳನ್ನು ಸೇವಿಸಬೇಕು. ಊಟದಲ್ಲಿ ಮೊಳಕೆ ಕಾಳು, ತರಕಾರಿ, ಹಣ್ಣಿನ ಸಲಾಡ್ ಹೆಚ್ಚು ಸೇವಿಸುವುದು ಉತ್ತಮ. ನಿತ್ಯ ತಣ್ಣೀರು ಅಥವಾ ಉಗುರು ಬೆಚ್ಚನೆ ನೀರಿನಲ್ಲಿ ಸ್ನಾನ ಮಾಡಬೇಕು. ಹಗುರವಾದ ಹತ್ತಿ ಉಡುಪುಗಳನ್ನು ಧರಿಸಬೇಕು. ಹೊರಗೆ ಹೋಗುವ ಮುನ್ನ ಸನ್‌ಸ್ಕ್ರೀನ್ ಲೋಷನ್ ಬಳಕೆ ಮಾಡಬೇಕು. ಕಣ್ಣಿನ ರಕ್ಷಣೆಗೆ ಕೂಲಿಂಗ್ ಗ್ಲಾಸ್ ಹಾಕಬೇಕು ಮತ್ತು ಓಡಾಡುವಾಗ ಕೊಡೆ ಬಳಕೆ ಮಾಡಬೇಕು. ಹೊರ ಹೋಗುವಾಗ ಮನೆಯಿಂದ ನೀರು ತೆಗೆದುಕೊಂಡು ಹೋಗಬೇಕು. ಹೊರಗಿನ ಆಹಾರ ಹಾಗೂ ಕರಿದ ಮತ್ತು ಹೆಚ್ಚು ಮಸಾಲ ಪದಾರ್ಥಗಳ ಬಳಕೆ ಮಾಡುವುದು ಸರಿಯಲ್ಲ.


## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊದ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com M: 9448633038

# ಛಲದಂಕಮಲ್ಲ ದುರ್ಯೋಧನನ ಔದಾರ್ಯ



ಮಹಾಭಾರತದಲ್ಲಿ ಕೌರವರ ಅಗ್ರಜ ದುರ್ಯೋಧನ ಅಸೂಯೆಗೆ ಮತ್ತೊಂದು ಹೆಸರು. ಛಲಗಾರ ದುರ್ಯೋಧನ ಪಾಂಡವರೆಡೆಗೆ ಅದೆಷ್ಟು ಕ್ರೌರ್ಯವನ್ನು ಸಾಧಿಸಿದನೋ ಅಷ್ಟೇ ಪ್ರೀತಿ, ವಿಶ್ವಾಸ, ಸ್ನೇಹವನ್ನು ತನ್ನ ಜೊತೆಗಿರುವವರೊಂದಿಗೆ ಹೊಂದಿದ್ದನು. ಆತನ ಈ ರೀತಿಯ ಪ್ರೀತಿ ವಿಶ್ವಾಸಕ್ಕೆ ಪಾತ್ರರಾದ ಹಲವರು ಆತನ ಔದಾರ್ಯ, ಮಿತ್ರ ಪ್ರೇಮವನ್ನು ಛಲವನ್ನು ಹಾಡಿ ಹೊಗಳುತ್ತಾರೆ.

ಗುರು ದ್ರೋಣಾಚಾರ್ಯರ ಬಳಿ ಶಸ್ತ್ರ ವಿದ್ಯೆ ಕಲಿತು ಪೂರೈಸಿದ ಶಿಷ್ಯರ ಪಾಂಡಿತ್ಯ ಪ್ರದರ್ಶನಕ್ಕೆ ಅರಮನೆಯ ಮೈದಾನದಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಪಂಚ ಪಾಂಡವರ ಜೊತೆಗೆ ದುರ್ಯೋಧನ ದುಶ್ಯಾಸನಾದಿಯಾಗಿ ನೂರು ಜನ ಕೌರವರ ಶಸ್ತ್ರ ವಿದ್ಯಾ ಪರಿಣತಿಯನ್ನು ಪರೀಕ್ಷಿಸುವ ಆ ಸಮಯದಲ್ಲಿ ಅಲ್ಲಿಗೆ ಸೂತಪುತ್ರ ರಾಧೇಯ ಆಗಮಿಸಿ ತಾನು ಅರ್ಜುನನನ್ನು ಮೀರಿಸುವ ಶಸ್ತ್ರ ವಿದ್ಯಾ ಪರಿಣತನಾಗಿದ್ದೇನೆ, ತನ್ನ ಪಾಂಡಿತ್ಯ ಪ್ರದರ್ಶನಕ್ಕೆ ಅವಕಾಶ ಕೊಡಿ ಎಂದು ಸಭೆಯ ಮುಖ್ಯಸ್ಥರಲ್ಲಿ ಅರಿಕೆ ಮಾಡಿಕೊಂಡನು. ಆದರೆ ಅರ್ಜುನನ ಮೇಲೆ ತುಸು ಹೆಚ್ಚೇ ಮಮಕಾರ ಇರಿಸಿಕೊಂಡಿದ್ದ ದ್ರೋಣರು ಇದಕ್ಕೆ ಒಡಂಬಡದೆ ಇದು ಕೇವಲ ರಾಜರ ಮತ್ತು ರಾಜ ಪುತ್ರರ ಪಾಂಡಿತ್ಯ ಪ್ರದರ್ಶನದ ಸ್ಥಳ ಎಂದು ಹೇಳಿದಾಗ ಅಲ್ಲಿಯೇ ಇದ್ದ ದುರ್ಯೋಧನನು ಕೂಡಲೇ ಸೂತ ಪುತ್ರ ರಾಧೇಯನೆಡೆ ಸ್ನೇಹದ ಹಸ್ತವನ್ನು ಚಾಚಿ, ತನ್ನ ಅಧಿಪತ್ಯದಲ್ಲಿದ್ದ ಅಂಗರಾಜ್ಯಕ್ಕೆ ಆತನನ್ನು ರಾಜನಾಗಿ ಘೋಷಿಸಿದನು. ಮುಂದೆ ಈ ಸ್ನೇಹವನ್ನು ತನ್ನ ಜೀವಿತದ ಕೊನೆಯವರೆಗೂ ಆತ ನಿಭಾಯಿಸಿದನು. ತನ್ನನ್ನು ಅವಮಾನಿಸಿದ ಎಲ್ಲರ ಮುಂದೆ ಸ್ನೇಹಹಸ್ತ ಚಾಚಿದ ದುರ್ಯೋಧನನೆಡೆ ಅಪರಿಮಿತ ಗೌರವವನ್ನು ಹೊಂದಿದ್ದ ಕರ್ಣ.

ಒಂದು ದಿನ ದುರ್ಯೋಧನನನ್ನು ಭೇಟಿಯಾಗಲು ರಾಜ ಭವನಕ್ಕೆ ಬಂದ ಕರ್ಣ ಅಲ್ಲಿ ದುರ್ಯೋಧನ ಹೊರಗೆ ಹೋಗಿದ್ದಾನೆಂಬ ವಿಷಯವನ್ನು ಅರಿತು ಮರಳುತ್ತಿರುವಾಗ ಅಲ್ಲಿಯೇ ಪಗಡೆಯ ಹಾಸನ್ನು ಹಾಕಿಕೊಂಡು ಕುಳಿತಿದ್ದ ದುರ್ಯೋಧನನ ಪತ್ನಿ ರಾಣಿ ಭಾನುಮತಿಯು ಕರ್ಣನನ್ನು ಪಗಡೆಯಾಡಲು ಆಹ್ವಾನಿಸಿದಳು. ಆಕೆಯ ಆಹ್ವಾನಕ್ಕೆ ಮನ್ನಣೆಯಿತ್ತ ಕರ್ಣ. ಇಬ್ಬರು ತಮ್ಮ ತಮ್ಮ ಕೊರಳ ಸರಗಳನ್ನು ಪಂಥವಾಗಿ ಇಟ್ಟರು. ಆಟದಲ್ಲಿ ಗೆದ್ದ ಕರ್ಣನು ಪಂದ್ಯದ ಪ್ರಕಾರ ಭಾನುಮತಿಯ ಕೊರಳ ಸರವನ್ನು ಕೊಡಲು ಆಗ್ರಹಿಸಿದನು. ಇದಕ್ಕೆ ಭಾನುಮತಿ ಒಪ್ಪದೆ ಹೋದಾಗ ತಮಾಶೆಯಾಗಿ ಮಾತಾಡುತ್ತಲೇ ಅಂಗ ರಾಜನು ಆಕೆಗೆ ಕೊರಳ ಮುತ್ತಿನ ಸರಕ್ಕೆ ಕೈ ಹಾಕಿದನು. ಭಾನುಮತಿ ಕೂಡಲೇ ಹಿಂದೆ ಸರಿದ ಕಾರಣ ಮುತ್ತಿನ ಸರ ತುಂಡಾಗಿ ಮುತ್ತುಗಳೆಲ್ಲ ಕೋಣೆಯ ತುಂಬಾ ಹರಡಿದವು. ಅದೇ ಸಮಯಕ್ಕೆ ಅಲ್ಲಿಗೆ ಬಂದ ದುರ್ಯೋಧನನು ಮುತ್ತುಗಳನ್ನು ಆಯುತ್ತಿದ್ದ ಸ್ನೇಹಿತ ಕರ್ಣನಿಗೆ ನಾನು ಕೂಡ ಮುತ್ತುಗಳನ್ನು ಆಯ್ದುಕೊಳ್ಳಲು ಸಹಾಯ ಮಾಡಲೇ ಎಂದು ಕೇಳಿದನು. ತನ್ನ ಪತ್ನಿ ಮತ್ತು ಸ್ನೇಹಿತನೆಡೆ ಅಷ್ಟೊಂದು ವಿಶ್ವಾಸ ಮತ್ತು ನಂಬಿಕೆಯನ್ನು ಹೊಂದಿದ್ದನು ದುರ್ಯೋಧನ.

ತನ್ನ ಮಗ ಪಾಂಡವರೊಂದಿಗೆ ಯುದ್ಧ ಮಾಡಲು ಸಂಪೂರ್ಣ ವಜ್ರದೇಹಿ ಆಗಿರಬೇಕು ಎಂಬ ಆಶಯದಿಂದ ಗಾಂಧಾರಿ ದುರ್ಯೋಧನನಿಗೆ ನದಿಯಲ್ಲಿ ಸ್ನಾನ ಮಾಡಿ ಸಂಪೂರ್ಣ ಬೆತ್ತಲೆಯಾಗಿ ತನ್ನ ಮುಂದೆ ಬಂದು ನಿಲ್ಲಲು ಹೇಳಿದಳು. ಮಾತೃ ವಾಕ್ಯ ಪರಿಪಾಲಕನಾದ ದುರ್ಯೋಧನನು ತಾಯಿ ಹೇಳಿದಂತೆ ನದಿಯಲ್ಲಿ ಸ್ನಾನ ಮಾಡಿ ನಗ್ನದೇಹಿಯಾಗಿ ಬರುತ್ತಿರುವಾಗ ಕೃಷ್ಣನು ಬ್ರಾಹ್ಮಣ ವೇಷದಲ್ಲಿ ಬಂದು ಆತನಿಗೆ ತಮಾಷೆ ಮಾಡಿ ಆತನ ನಗ್ನತೆಯನ್ನು ಅಣಕಿಸಿದನು. ಆಗ ದುರ್ಯೋಧನನು ತನ್ನ ಸೊಂಟದ ಸುತ್ತ ಬಾಳೆಎಲೆಯನ್ನು ಕಟ್ಟಿಕೊಂಡು ತಾಯಿಯ ಮುಂದೆ ಮಾತೃ ವಾಕ್ಯ ಪರಿಪಾಲಕನಾಗಿ ಬಂದು ನಿಂತನು. ಈಗಾಗಲೇ ಎದೆಯುದ್ಧ ಬೆಳೆದ ಮಕ್ಕಳನ್ನು ಹೊಂದಿದ್ದರು ಕೂಡ ತಾಯಿಯ ಮಾತನ್ನು ಪಾಲಿಸುತ್ತಿದ್ದ ದುರ್ಯೋಧನ ತಂದೆ ಮತ್ತು ಮಾವ ಶಕುನಿಯನ್ನು ಕೂಡ ಅಷ್ಟೇ ಗೌರವದಿಂದ ಕಾಣುತ್ತಿದ್ದನು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

ಮುಂದೆ ಕುರುಕ್ಷೇತ್ರ ಯುದ್ಧದ ಸಮಯದಲ್ಲಿ ದುರ್ಯೋಧನನು ಚಕ್ರವ್ಯೂಹವನ್ನು ಪ್ರವೇಶಿಸಲು ಬಂದ ಅಭಿಮನ್ಯುವನ್ನು ಕುರಿತು ಕೌರವ ಮತ್ತು ಪಾಂಡವರ ಎರಡು ಕುಲಕ್ಕೆ ತಿಲಕಪ್ರಾಯ ನೀನು ಎಂದು ಅಭಿಮನ್ಯುವನ್ನು ಮೆಚ್ಚಿಕೊಂಡನು. ನಿನ್ನನ್ನು ಮಗನನ್ನಾಗಿ ಪಡೆದ ಪಾರ್ಥನೆ ಧನ್ಯ. ನಿನ್ನನ್ನು ತನ್ನುದರದಲ್ಲಿ ಬೆಳೆಸಿದ ಸುಭದ್ರೆ ಧನ್ಯಳು. ನಿನ್ನ ಶೌರ್ಯ ವೀರತ್ವದ ಗಾಥೆಗಳು ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಉಳಿಯುತ್ತವೆ ಎಂದು ಹಾರೈಸಿದ್ದ ದುರ್ಯೋಧನ.

ಅದೆಷ್ಟೇ ಛಲದಂಕಮಲ್ಲನಾದರೂ ತನ್ನನ್ನು ನಂಬಿದವರನ್ನು ಎಂದೂ ಕೈ ಬಿಡಲಿಲ್ಲ ದುರ್ಯೋಧನ. ಯುದ್ಧದಲ್ಲಿ ತಾನು ಸೋಲುತ್ತೇನೆ ಎಂಬ ಅರಿವಿದ್ದರೂ ಕೂಡ ರಣರಂಗಕ್ಕೆ ಬೆನ್ನು ಹಾಕಲಿಲ್ಲ. ತನ್ನ ಸ್ನೇಹಿತನಾದ ಅಂಗರಾಜ ಕರ್ಣನೆಡೆಗೆ ಆತನಿಗಿದ್ದ ಅಪರಿಮಿತ ವಿಶ್ವಾಸ ಆತನ ಶತ್ರುಗಳು ಕೂಡ ಮೆಚ್ಚುವಂಥದ್ದು. ಬಹುಶಹ ಆತನ ಪ್ರೀತಿ, ವಿಶ್ವಾಸ, ಗೌರವದ ಮತ್ತು ಆತನ ಉಪ್ಪುಂಡ ಸಲುವಾಗಿಯೇ ಆತ ತಪ್ಪು ಎಸಗುತ್ತಿದ್ದಾನೆ ಎಂಬ ಅರಿವಿದ್ದರೂ ಕೂಡ ಭೀಷ್ಮ, ದ್ರೋಣ, ಕೃಪರಾದಿಯಾಗಿ ಎಲ್ಲರೂ ಆತನಿಗೆ ಯುದ್ಧದಲ್ಲಿ ಜೊತೆ ನೀಡಿದ್ದು. ಆದ್ದರಿಂದಲೇ ಇತಿಹಾಸದಲ್ಲಿ ತನ್ನ ಛಲ, ಅಸೂಯೆ, ಸ್ನೇಹ ಮತ್ತು ಔದಾರ್ಯಕ್ಕೆ ಅಜರಾಮರನಾಗಿದ್ದಾನೆ ಮಹಾರಥಿ ದುರ್ಯೋಧನ.

# ಹೊಟ್ಟೆಯೊಳಗಿನ ಅಗ್ನಿ ನೆರೆಮನೆಯ ಸುಟ್ಟೀತೆ?

ಇದೊಂದು ರೀತಿಯಲ್ಲಿ ಹೊಟ್ಟೆಯೊಳಗಿನ ಮಂದಾಗ್ನಿ ಕಂಡೂ ಕಾಣದಂತೆ ಇದ್ದು ಒಳಗೊಳಗೇ ನಮ್ಮನ್ನು ನಮ್ಮ ತನವನ್ನು ಜೊತೆಗೆ ನಮ್ಮವರನ್ನೂ ತಿಂದು ತೇಗುವ ಪರಮ ಮಾನವ ವೈರಿ ಎಂದರೆ ತಪ್ಪಿಲ್ಲ.

ಇಂತಹ ವಿಚಾರಗಳು ನಮ್ಮನ್ನು ಬಾದಿಸಿದಾಗ ನಮ್ಮ ಮನಸ್ಸಿನಲ್ಲಿ ಉಂಟಾಗುವ ಗೊಂದಲಗಳ ಪರಿಹಾರಕ್ಕೆ ಶರಣರ, ಸಜ್ಜನರ ಅನೇಕ ವಿಚಾರಗಳಲ್ಲಿ ಪರಿಹಾರವನ್ನು ಕಾಣಬಹುದಾಗಿದೆ.

ಅಣ್ಣ ಶ್ರೀ ಬಸವಣ್ಣನವರರು ಹೇಳಿದಂತೆ "ಮನದ ಕೋಪ ತನ್ನ ಅರಿವಿನ ಕೇಡು, ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ ನೆರೆಮನೆಯ ಸುಡದು" ಎನ್ನುವಂತಹ ವೈಚಾರಿಕ, ಮನೋವೈಜ್ಞಾನಿಕ ವಿಚಾರ ದಾರೆಯು ನರ ಮಾನವರಲ್ಲಿನ ಸಹಜ ಎನ್ನುವಂತೆ ಬೇರು ಬಿಟ್ಟಿರುವ ಅನೇಕ ಮನೋವಿಕಲ್ಪಗಳಿಗೆ ಸಮಾಧಾನವನ್ನು ನೀಡುತ್ತವೆ.

ನನ್ನನ್ನು ಬಹುವಾಗಿ ಕಾಡಿದ ವಚನಗಳಲ್ಲಿ ಶ್ರೀ ಬಸವಣ್ಣನವರರು ಈ ವಚನವನ್ನು ಹುಲು ಮಾನವರಾದ ನಾವು ನಮ್ಮನ್ನು ಅರ್ಥೈಸಿಕೊಳ್ಳಲು ಪ್ರಯತ್ನ ಮಾಡುವುದಾದರೆ, ಹೇಗೆ ನಮಗೆಲ್ಲ, ನಮ್ಮ ವಿಕಲ್ಪಗಳಿಗೆಲ್ಲ ಒಂದು ಸ್ಪಷ್ಟತೆಯ ನೆಲೆಗಟ್ಟನ್ನು ಒದಗಿಸುತ್ತದೆ ಅಲ್ಲವೆ?

**"ತನಗೆ ಮುನಿವರಿಗೆ**
**ತಾ ಮುನಿಯಲೇಕಯ್ಯಾ**
**ತನಗಾದ ಆಗೇನು**
**ಅವರಿಗಾದ ಚೇಗೆಯೇನು**
**ತನುವಿನ ಕೋಪ**
**ತನ್ನ ಹಿರಿಯತನದ ಕೇಡು**
**ಮನದ ಕೋಪ**
**ತನ್ನ ಅರಿವಿನ ಕೇಡು**
**ಮನೆಯೊಳಗಣ ಕಿಚ್ಚು**
**ಮನೆಯ ಸುಟ್ಟಲ್ಲದೆ**
**ನೆರೆಮನೆಯ ಸುಡದು**
**ಕೂಡಲಸಂಗಮದೇವಾ.**



ಜಿ ಶಿವಕುಮಾರ್ ಸೋಗಿ
ಲೇಖಕರು, 9008130204

ಒಮ್ಮೆ ಈ ವಚನವನ್ನು ಅದರ ತಾತ್ಪರ್ಯವನ್ನು ತಿಳಿಯುವ ಪ್ರಯತ್ನ ಮಾಡಿದರೆ, ಮಾನವರಾದ ನಾವು ಮಾನವತೆಯನ್ನು ಮರೆತು, ಮಾನವತ್ವದ ಸಹಜ ಸಂಪನ್ನ ಗುಣಗಳಾದ ಪ್ರೀತಿ, ಪ್ರೇಮ, ಕರುಣೆ, ಕನಿಕರ, ವಾತ್ಸಲ್ಯ, ಸಹಾಯ ಸಹಕಾರ ಸಹಬಾಳ್ವೆಯಂತಹ ಸದ್ಗುಣಗಳನ್ನುಮರೆತು,ಮತ್ತೊಬ್ಬರಏಳ್ಗೆಯನ್ನುಅರಗಿಸಿಕೊಳ್ಳಲಾಗದೆ, ಒಳಗೊಳಗೆ ನೊಂದುಕೊಂಡು ಕರುಬುತ್ತಾ ಕೂಡುತ್ತೇವೆ.

ನಮ್ಮ ಏಳ್ಗೆಯನ್ನೂ ಮರೆತು, ಹೇಗೆ ನಮ್ಮ ಅಮೂಲ್ಯವಾದ ಸಮಯ, ಆರೋಗ್ಯ ವನ್ನು ಹಾಳುಮಾಡಿಕೊಳ್ಳುತ್ತೇವೆ ಅಲ್ಲವೆ? ಅವಕಾಶಗಳಿಗೆ ಅನೈತಿಕ ಮಾರ್ಗಗಳಲ್ಲಿ ಪ್ರಯತ್ನಿಸಿ, ಅವುಗಳು ಸಾಕಾರವಾಗದಿದ್ದಾಗ ನೊಂದು, ಹಪಹಪಸಿ ನೋವುಂಡು, ಇತರರನ್ನು ಹಣಿಯಲು ಅವರನ್ನು ಅವರ ಉನ್ನತಿಯನ್ನು ಹಾಳು ಮಾಡಿ ವಿಕೃತವಾದಂತಹ ಖುಷಿಯನ್ನು ಅನುಭವಿಸುತ್ತೇವೆ.



ಇದೊಂದು ತರಹದ ಹೊಟ್ಟೆಯೊಳಗಿನ ಅಗ್ನಿ, ಹೊಟ್ಟೆಕಿಚ್ಚೆ ಅನ್ನಬಹುದಾದ ಒಂದು ರೀತಿಯ ಮಾನವನ ಮನೋವೈಜ್ಞಾನಿಕ ವಿಚಾರಕ್ಕೆ ಸಂಬಂದಿಸಿದ ಅಂಶವಾಗಿದೆ. ಇದರ ಬಗ್ಗೆ ಸರಿಯಾಗಿ ಅರ್ಥೈಸಿಕೊಳ್ಳಲು, ಈ ಹೊಟ್ಟೆಕಿಚ್ಚಿನ ಬಗ್ಗೆ ವೈಜ್ಞಾನಿಕವಾದ ಅಧ್ಯಾಯನದ ಅವಶ್ಯಕತೆ ಇರುವುದು ಕಂಡುಬರುತ್ತದೆ. ಹಾಗೆಯೆ ಮನುಷ್ಯ ಮನುಷ್ಯರ ಮಧ್ಯದ ಮಾನವೀಯ ಸಂಬಂದಗಳ ಸರಪಳಿಯನ್ನು ತಿಳಿದುಕೊಳ್ಳಬೇಕಾದ ಅನಿವಾರ್ಯತೆ ಸಾಕಷ್ಟು ಇದೆ. ನಮ್ಮ ಜೀವನದಲ್ಲಿ ನೆಮ್ಮದಿ ಕಂಡುಕೊಳ್ಳಬೇಕೆಂದರೆ ನಾವೆಲ್ಲರೂ ತಿಳಿಯಲೇಬೇಕಾದ ಹಲವಾರು ವಿಚಾರಗಳಿವೆ.

ಸರಿ ಹಾಗಾದರೆ ನಮಗೇಕೆ ಇತರರ ಬಗ್ಗೆ, ಕೆಲವು ಸಲ ನಮ್ಮವರ ಬಗ್ಗೆ, ನಮ್ಮ ಮನೆಯವರ ಬಗ್ಗೆ, ಸ್ನೇಹಿತ, ಸಹಪಾಠಿ, ಸಹೋದರ ಹೀಗೆ ನಮ್ಮ ನಮ್ಮವರ ಬಗ್ಗೆ ಈ ರೀತಿಯಾದಂತ ಹೊಟ್ಟೆ ಉರಿಯಲು ಸಜ್ಜಾಗುತ್ತದೆ? ಈ ಹೊಟ್ಟೆ ಉರಿ ಹೇಗೆ ಮತ್ತು ಏಕೆ ಉಂಟಾಗುತ್ತದೆ? ಎನ್ನುವುದನ್ನು ನೋಡುವುದಾದರೆ,

ಮಾನವ ಸಹಜವಾಗಿ ಕೆಲವು ಮೂಲ ಸಹಜವಲ್ಲದ ಆದರೆ ರೂಡಿಸಿಕೊಂಡಿರುವ ಗುಣಗಳನ್ನು ಉದಾ: ಹೊಟ್ಟೆಕಿಚ್ಚು, ಅಸೂಯೆ, ಮತ್ಸರ, ತಾತ್ಸಾರ ಮತ್ತು ತಿರಸ್ಕಾರಗಳ ಬಗ್ಗೆ ಮತ್ತು ಇವುಗಳ ನಡುವಿನ ಒಂದ ಕ್ಕೊಂದು ಇರಬಹುದಾದ ಹತ್ತಿರ ಸಂಬಂಧವನ್ನು ಅರ್ಥಮಾಡಿಕೊಳ್ಳಬೇಕು. ಈ ಅಸೂಯೆ, ಮೋಹ, ಮತ್ಸರ, ತಾತ್ಸಾರ ಯಾರಿಗಿಲ್ಲ ಹೇಳಿ? ನಮಗರಿವಿಲ್ಲದಂತೆ ನಮ್ಮೆಲ್ಲರಲ್ಲೂ ಇದ್ದೇ ಇರುತ್ತವೆ. ಅದು ಒಂದು ರೀತಿಯಲ್ಲಿ ಮಾನವನ ಸಹಜ ಗುಣವೇನೊ ಅನ್ನುವಂತಾಗಿದೆ.

ಒಂದು ಮಾತನ್ನು ನಾವೆಲ್ಲರೂ ಅರ್ಥಮಾಡಿ ಕೊಳ್ಳಬೇಕಿದೆ, ಮಾಡಿಕೊಳ್ಳಲೇಬೇಕಾದ ಅನಿವಾರ್ಯತೆಯೂ ಇದೆ, ಅದೇನಂದರೆ ಮತ್ತೊಬ್ಬರ ಕುರಿತ ನಮ್ಮ ಈ ಅಸೂಯೆ ಮತ್ತು ಮತ್ಸರದಂತಹ ಗುಣಗಳು ಒಂದು ಹಂತಕ್ಕೆ ನಮ್ಮ ವೈಯಕ್ತಿಕ ಬೆಳವಣಿಗೆಗೆ ನಮ್ಮ ಹಿತಾಸಕ್ತಿಗೆ ನಮ್ಮ ಅಭಿವೃದ್ಧಿಗೆ ಅನಿವಾರ್ಯ ಎನಿಸಿದರೂ ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಅದು ಹಾಗಲ್ಲ,

ಏಕೆಂದರೆ ಮತ್ತೊಬ್ಬರ ಗುಣಗಳನ್ನು, ಅವರ ಜಾಣ್ಮೆಯನ್ನು, ಅವರಲ್ಲಿನ ಶಕ್ತಿ ಸಾಮರ್ಥ್ಯ ವನ್ನು ಕಂಡು ಹೆಮ್ಮೆ ಪಟ್ಟುಕೊಳ್ಳುವುದು, ಅಂತಹ ಗುಣಗಳನ್ನು ನಾವೂ ಹೊಂದಬೇಕು, ನಮ್ಮಲ್ಲೂ ಅಂತಹ ಗುಣಗಳ ಆವಾಹನೆ ಉಂಟಾಗಿ ತಾವೂ ಅಭಿವೃದ್ಧಿ ಹೊಂದಬೇಕು ಎನ್ನುವುದು ಸರಿಯಾದ ಮಾರ್ಗವಾಗಿದೆ ಎನ್ನಬಹುದು.

ಪ್ರತಿಯೊಬ್ಬರೂ ತಮ್ಮ ಸುತ್ತ ಮುತ್ತ ಬೆಳೆಯುತ್ತಿರುವಂತಹ ಇತರ ವ್ಯಕ್ತಿಗಳನ್ನು ನೋಡಿ ತಾನೂ ಸಹ ಅವರಂತೆಯೇ, ಅವರು ಬೆಳೆದ ಆ ಹಂತಕ್ಕೆ ತಾವೂ ಬೆಳೆಯಬೇಕು ಎನ್ನುವವರೆಗೆ ಈ ರೀತಿಯಾದ ಸದುದ್ದೇಶದ, ಸಹಜವಲ್ಲದ ಗುಣಗಳು ಇರುವುದು ಒಂದು ಹಂತಕ್ಕೆ ಒಳ್ಳೆಯದೇ ಎನ್ನಬಹುದೇನೊ.

ಆದರೆ ಶತಾಯಗತ ಇತರರನ್ನು ಕೆಳಗೆಳೆದು, ಅವರನ್ನು ತುಳಿದು, ಅಸಹಜವಾದರು ಸರಿ ಮತ್ತು ಅನೈತಿಕ ಮಾರ್ಗವಾದರೂ ಸರಿಯೇ ನಾನು ಮಾತ್ರ ಬೆಳೆಯಬೇಕು ಎನ್ನುವುದು. ಜೊತೆಗೆ ಬೆಳೆದವರ ಏಳ್ಗೆಯನ್ನು ಸಹಿಸಿಕೊಳ್ಳಲಾಗದೆ ಒಳಗೊಳಗೇ ಅವರ ಕುರಿತು ಒಂದು ರೀತಿಯಲ್ಲಿ ಅಸಹ್ಯ ಪಡುವುದು, ಕರುಬುವುದು ತನಗೂ ಒಳ್ಳೆಯದಲ್ಲ ಮತ್ತು ತನ್ನ ಸುತ್ತಮುತ್ತಲಿನವರಿಗೂ ಒಳ್ಳೆಯದಲ್ಲ ಎಂಬುವುದನ್ನು ನಾವೆಲ್ಲರೂ ಮನಗಾಣಬೇಕು. ಯಾರೆ ಆಗರಲಿ, ಎಷ್ಟೇ ದೊಡ್ಡವರಾಗರಲಿ, ಎಂತಹದ್ದೇ ಸಾಧನೆ ಮಾಡರಲಿ. ಇತರರನ್ನು ಕಂಡು, ಇತರರ ಒಳ್ಳೆಯತನವನ್ನು, ಇತರರ ಸಿರಿ ಸಂಪತ್ತನ್ನು, ಇತರರಿಗೆ ಸಿಗುತ್ತಿರುವ ಮಾನ ಸಮ್ಮಾನಗಳನ್ನು ನೋಡಿ ಮನಸ್ಸಿನಲ್ಲಿ ನೊಂದುಕೊಂಡರೆ ಅವರ ಆ ದೊಡ್ಡತನ, ಅವರ ಆ ಸಾಧನೆ ನೀರಿನಲ್ಲಿ ಮಾಡಿದ ಹೋಮದಂತೆ, ಹೊಳೆಯಲ್ಲಿ ತೊಳೆದ ಹುಣಸೆ ಹಣ್ಣಿನಂತೆ ಅನುಪಯುಕ್ತವಾಗಿ ಹಾಳಾಗುತ್ತದೆ.

ಮನುಷ್ಯರಲ್ಲಿನ ಈ ಅನಾಹುತಕಾರಿ ಅವಗುಣದ ಒಂದು ವಿಶೇಷವೆಂದರೆ ಇದು ನಮ್ಮ ನಿಮ್ಮ ಮಧ್ಯದಲ್ಲೇ ಹುಟ್ಟಿಕೊಳ್ಳುತ್ತದೆ. ನಮ್ಮ ನಮ್ಮವರೂ ಎಂದು ನಾವೇನು ಹೇಳಿಕೊಳ್ಳುತ್ತೇವೆ ನೋಡಿ ಅಲ್ಲಿಂದಲೇ ಪ್ರಾರಂಭವಾಗಿ. ನಮ್ಮ ನಮ್ಮವರ ಸುತ್ತಲೂ ಗಿರಿಕಿ ಹೊಡೆಯುತ್ತಾ ನಮ್ಮ ನಮ್ಮವರನ್ನೆ ತಿಂದು ತೇಗಿ ತಾನು ಮಾತ್ರ ಹೊಟ್ಟೆಯಿಂದ ಹೊಟ್ಟೆಗೆ, ಮನಸ್ಸಿನಿಂದ ಮನಸ್ಸಿಗೆ, ಮನುಷ್ಯರಿಂದ ಮನುಷ್ಯರಿಗೆ ಬೆಳೆಯುತ್ತಲೇ ಇರುತ್ತದೆ.

ಈ ಹೊಟ್ಟೆಕಿಚ್ಚಿನ ವಿಶೇಷತೆ ಏನೋ ಎನ್ನುವಂತೆ, ಇದು ಕಣ್ಣಿಗೆ ಕಾಣದ, ಮೈಗೆ ಸುಡದ, ಬೇಗನೆ ಆರದ ಮಂದಾಗ್ನಿ ಎಂದರೆ ತಪ್ಪಾಗಲಾರದು. ಇದು ತನ್ನತನವನ್ನು, ತನ್ನನ್ನೂ ತನ್ನವರನ್ನೂ ಸಹ ಕಾಣದಂತೆ ಸುಟ್ಟುಹಾಕುತ್ತದ.

ಎಲ್ಲಾರೂ ಮಾಡುವುದು ಹೊಟ್ಟೆಗಾಗಿ ಅಂದುಕೊಂಡು ಮೈ ಮರೆಯದೇ, ನಮ್ಮ ಮನೆ ಮತ್ತು ಮನದೊಳಗಿನ ವೈರಿಗಳ ಯಾದಿಯಲ್ಲಿ ಅಗ್ರ ಸ್ಥಾನದಲ್ಲಿರುವ ಈ ಹೊಟ್ಟೆಯ ಅವಗುಣದ ಬಗ್ಗೆ ಇರಲಿ ಸದಾ ಎಚ್ಚರ!

## ಕವಿ ಮನಸು

### ಕೆಸರಾಟ



ಗೆಳೆಯರೊಂದಿಗೆ ಆಡೋಣ ಕೆಸರಾಟ
ಮುಗಿಯಿತು ಪರೀಕ್ಷೆಯ ಕಾಟ
ನಾಯಿ ಮರಿಗಳೊಂದಿಗೆ ಜೂಟಾಟ
ಹಸಿರು ಗದ್ದೆಯ ಹಿನ್ನೋಟ

ಅಮ್ಮ ಬಂದರಿಲ್ಲಿಂದ ಓಟ
ಹೇಳಲಾಗದು ನಮ್ಮೀ ಪರದಾಟ
ಬೇಕಿಲ್ಲ ನಿದ್ರೆ ಊಟವು
ಎಲ್ಲವೂ ನಮಗೆ ಆಟವು

ಬಟ್ಟೆ ಕೊಳೆಯಾದರೆ ಏನಂತೆ
ಒಗೆದರಾಯಿತು ಬಿಡು ಚಿಂತೆ
ಕೆಸರು ಮೆತ್ತಿದೆ ಮೈ ಮುಖವು
ಆಗದು ಎಂದಿಗೂ ದಣಿವು

– ಚೇತನ ಭಾರ್ಗವ

### ಜೀವಾಮೃತ ಜಲ



ನೀರು ಜೀವನ, ಬಳಕೆಯಲ್ಲಿ ಮಿತವಿರಲಿ
ನೀರು ಪಾವನ, ಮರುಬಳಕೆಯಾಗಲಿ

ಶುದ್ಧ ನೀರನ್ನು ಕುಡಿಯೋಣ
ಆರೋಗ್ಯದಿಂದ ಬಾಳೋಣ
ಗಿಡಗಳನ್ನು ಬೆಳೆಸೋಣ
ಹರಿಯುವ ನೀರನು ತಡೆಯೋಣ

ನಾಡಿಗೆ ಬಂದೋದಗಿದೆ ಇಂದು ಬರಗಾಲ
ವಿಶ್ವದಲ್ಲೆಲ್ಲಾ ಕುಂದುತ್ತಿದೆ ಅಂತರ್ಜಲ

ಓಡುವ ನೀರನ್ನು ನಡೆಯುವಂತೆ,
ನಡೆಯುವ ನೀರನ್ನು ತೆವಳುವಂತೆ,
ತೆವಳುವ ನೀರನ್ನು ನಿಲ್ಲುವಂತೆ,
ನಿಂತ ನೀರನ್ನು ಇಂಗುವಂತೆ,
ಮಾಡುತ ಅಂತರ್ಜಲ ಹೆಚ್ಚಿಸೋಣ
ಹನಿ ಹನಿ ನೀರನ್ನು ಉಳಿಸೋಣ

ನೀರು ನಮಗಾಗಿ ನೀ ಇರು
ನೀರಿಲ್ಲದೆ ಸಾಯುತಿವೆ ಮುಗ್ಧ
ಜಾನುವಾರು

ನೀ ಸಕಲ ಜೀವ ಸಂಕುಲಕ್ಕೆ ಜೀವಾಮೃತ
ನೀ ಇಲ್ಲದಿದ್ದರೆ ಇಡೀ ಭೂಲೋಕವೇ
ಕೊತಕೊತ
ಜಲವಿಲ್ಲದೆ ಜೀವವಿಲ್ಲಾ, ಜಲದಿಂದಲೇ
ಸಕಲ

– ಸಂಗಮೇಶ ಹೂಗಾರ
ಬಿ.ಡಿ.ಸಿ.ಸಿ ಬ್ಯಾಂಕ್ ಹೊಸಪೇಟೆ

# ಅಕ್ಷರಗಳ ಮಾಲೆ ನಮ್ಮೂರಿನ ಶಾಲೆ

## ಜ್ಞಾನ ಕೊಟ್ಟ ಜ್ಞಾನದೇಗುಲಗಳಿಗೆ ಬೇಕಿದೆ ನಮ್ಮಗಳ ಸೇವೆ

■ **ಮುತ್ತು. ಯ. ವಡ್ಡರ** ಶಿಕ್ಷಕರು
ಸ.ಪ್ರಾ.ಶಾಲೆ.ಹಿರೇಮಳಗಾವಿ, ಬಾಗಲಕೋಟ.

ಜ್ಞಾನ ದೇಗುಲವಿದು ಕೈ ಮುಗಿದು ಒಳಗೆ ಬಾ ಎಂಬ ಕುವೆಂಪುರವರ ನುಡಿಯಂತೆ, ಭಕ್ತರಿಗೆ ದೇವಾಲಯವಾದರೆ ಪ್ರತಿ ವಿದ್ಯಾರ್ಥಿಗಳ ಪಾಲಿಗೆ ಶಾಲೆಯೇ ದೇವಾಲಯವಿದ್ದಂತೆ. ನಾವು ಜ್ಞಾನವನ್ನು ಪಡೆಯುವ ಸ್ಥಳವನ್ನು ಶಾಲೆ ಎಂದು ಕರೆಯಲಾಗುತ್ತದೆ. ಶಾಲೆಗೆ ದೇವಾಲಯದ ಸಾದೃಶ್ಯವನ್ನು ನೀಡಲಾಗಿದೆ. ನಮ್ಮ ಜೀವನದ ಪ್ರಮುಖ ಭಾಗವೆಂದರೆ ನಮ್ಮ ಬಾಲ್ಯ ಮತ್ತು ನಮ್ಮ ಬಾಲ್ಯವು ಶಾಲೆಯ ನೆನಪುಗಳಿಂದ ತುಂಬಿರುತ್ತದೆ. ಶಾಲೆ ಎಂದರೆ ಶಿಸ್ತು,ಶಿಕ್ಷಣ, ಶಿಕ್ಷಕರು,ಗೆಳತಿಯರು, ಗೆಳೆಯರು ಮುಂತಾದ ಚಿತ್ರಣ ಕಣ್ಮುಂದೆ ಬರುತ್ತದೆ. ಮಕ್ಕಳ ಸರ್ವಾಂಗೀಣ ಬೆಳವಣಿಗೆಯಲ್ಲಿ ಶಾಲೆಯ ಪಾತ್ರ ಅತ್ಯಂತ ದೊಡ್ಡದು. ಶಾಲೆಯು ಪ್ರತಿ ವಿದ್ಯಾರ್ಥಿಯ ಬದುಕನ್ನು ರೂಪಿಸುವ ಸುಂದರವಾದ ಸ್ಥಳವಾಗಿದೆ. ಇಲ್ಲಿ ಯಾವುದೇ ರೀತಿಯ ತಾರತಮ್ಯದ ಭಾವ ಕಂಡುಬಾರದು. ಪ್ರತಿ ಮಗು ತನ್ನ ಮನೆಯಲ್ಲಿ ಜನ್ಮ ನೀಡಿದ ಹೆತ್ತವರನ್ನು ದೇವರಾಗಿ ಕಂಡರೆ, ಶಾಲೆಯಲ್ಲಿ ತನಗೆ ಜೀವನಕ್ಕೆ ಬೇಕಾದ ಅಮೂಲ್ಯವಾದ ಜ್ಞಾನ ಸಂಪತ್ತು ನೀಡುವ ಗುರುಗಳನ್ನು ದೇವರಾಗಿ ಕಾಣುವುದು. ಪ್ರಸ್ತುತ ದಿನಮಾನಗಳಲ್ಲಿ ಶಾಲೆಗಳು ಬಹಳ ಅಭಿವೃದ್ಧಿಯಾಗಿ ವಿದ್ಯಾರ್ಥಿಗಳಿಗೆ ಆಕರ್ಷಣೀಯ ತಾಣಗಳಾಗಿವೆ. ಮಾನವನಾಗಿ ಹುಟ್ಟಿದ ನಾವು ಮನುಷ್ಯತ್ವದಿಂದ ಬದುಕುವ ಮೌಲ್ಯ ಶಿಕ್ಷಣವನ್ನು ನೀಡುವ ಕೇಂದ್ರವೇ ಶಾಲೆ. ವಿದ್ಯಾ ಮಾತೆ ಸರಸ್ವತಿಯ ನೆಲೆಬೀಡು ನಮ್ಮೂರ ಶಾಲೆ. ಪ್ರತಿ ವಿಷಯ ಕಲಿಸಲು ಒಂದೊಂದು ವಿಷಯಕ್ಕೆ ಒಬ್ಬ ಅತ್ಯುತ್ತಮ ವಿಷಯ ಪಂಡಿತರು ಇರುವ ಶಿಕ್ಷಕರು. ದೈಹಿಕವಾಗಿ ಸದೃಡರಾಗಲು ಸುಂದರವಾದ



ಶಾಲಾ ಮೈದಾನ. ಮನಸ್ಸಿನ ಶಾಂತಿಗಾಗಿ ಪ್ರಾರ್ಥನಾ ಸ್ಥಳ. ಗುಪ್ತವಾಗಿ ಅಡಗಿರುವ ಕಲೆಯನ್ನು ವ್ಯಕ್ತಪಡಿಸಲು ಕಲಾಮಂದಿರದ ಭವ್ಯವೇದಿಕೆ. ಮನಶ್ಯಾಂತಿಯ ಜೊತೆಗೆ ಏಕಾಗ್ರತೆಯಿಂದ ಅಧ್ಯಯನಶೀಲರಾಗಲು ಸುಂದರ ಸ್ವಚ್ಛವಾದ ಪರಿಸರ. ಕಲಿಕೆಗೆ ಸ್ಪೂರ್ತಿ ತುಂಬಲು ಬಹಳ ಅಂದವಾದ ಕೈಬರಹದ ಗೋಡೆಗಳು. ಇವೆಲ್ಲವನ್ನೂ ನೋಡಿದಾಗ ಶಾಲೆ ಬಿಟ್ಟು ಮನೆಗೆ ಹೋಗಲು ತುಂಬಾ ಬೇಸರವಾಗುತ್ತದೆ.

ಒಬ್ಬ ವ್ಯಕ್ತಿಯು ತನ್ನ ಜೀವಿತಾವಧಿಯಲ್ಲಿ ಎಂದೂ ದೇವಸ್ಥಾನದ ಮೆಟ್ಟಿಲು ಹತ್ತುವನೋ ಇಲ್ಲವೋ ಗೊತ್ತಿಲ್ಲ, ಆದರೆ ಶಾಲೆಯ ಮೆಟ್ಟಿಲು ಮಾತ್ರ ಹತ್ತಲೇಬೇಕು. ಅಜ್ಞಾನದಿಂದ ಜ್ಞಾನದ ಕಡೆಗೆ ಕೊಂಡೊಯ್ಯುವ, ಕತ್ತಲೆಯಿಂದ ಬೆಳಕಿನೆಡೆಗೆ ಸಾಗುವ ಮಾರ್ಗವನ್ನು ತಿಳಿಸುವ ಶಕ್ತಿ ಕೇಂದ್ರವೇ ಶಾಲೆ. ಬಿಳಿ ಹಾಳೆಯಂತಿರುವ ಪ್ರತಿಯೊಬ್ಬ ವ್ಯಕ್ತಿಯ ಬದುಕನ್ನು ವರ್ಣಮಯ ಮಾಡಿ ಸಮಾಜದಲ್ಲಿ ಒಬ್ಬ ಉತ್ತಮ ವ್ಯಕ್ತಿಯನ್ನಾಗಿ ರೂಪಿಸುವ ಜ್ಞಾನದ ಆಗರವೇ ಶಾಲೆ. ಈ ಭೂಮಿಯ ಮೇಲಿರುವ ಎಲ್ಲ ಉನ್ನತ ಮಟ್ಟದ ವೃತ್ತಿಯಲ್ಲಿರುವ ವ್ಯಕ್ತಿಗಳನ್ನು ನಿರ್ಮಾಣ ಮಾಡಿದ ಜ್ಞಾನ ದೇಗುಲವೇ ಶಾಲೆ. ಪ್ರತಿ ಊರಿನಲ್ಲಿ ಏನಿರದಿದ್ದರೂ ನಡೆಯಬಹುದು ಆದರೆ ಶಾಲೆ ಇರದಿದ್ದರೆ ಅಲ್ಲಿರುವ ಜನರ ಬದುಕು ಕಷ್ಟಕರವಾಗುವುದು. ಆ ಊರು ಅನಕ್ಷರತೆಯಿಂದ ಬಳಲುವುದು. ಶೈಕ್ಷಣಿಕವಾಗಿ ಯಾವ ಮಗು ಕೂಡ ಹಿಂದೆ ಬೀಳಬಾರದು ಆ ನಿಟ್ಟಿನಲ್ಲಿ ಪ್ರತಿಯೊಬ್ಬ ಪಾಲಕರು ಕೂಡ ತಮ್ಮ ಮಕ್ಕಳನ್ನು ತಮ್ಮೂರಿನ ಶಾಲೆಗೆ ನಿತ್ಯ ಕಳಿಸಿ ಅವರ ಬದುಕನ್ನು ರೂಪಿಸುವ ಕೆಲಸ ಮಾಡಲೇಬೇಕು. ಅಂದಾಗ ಮಾತ್ರ ನಾವು ಸಾಕ್ಷರತಾ ರಾಷ್ಟ್ರನಿರ್ಮಾಣ ಮಾಡುವುದರಲ್ಲಿ ಸಫಲರಾಗುತ್ತೇವೆ. ನಮ್ಮೂರಿನ ಶಾಲೆಯನ್ನು ಪ್ರೀತಿಸೋಣ ಅಲ್ಲಿರುವ ಗುರು-ಗುರುಮಾತೆಯರನ್ನು ಗೌರವಿಸೋಣ. ಶಾಲೆ ಎಂದರೆ ಒಂದು ಸುಂದರ ದೇವಸ್ಥಾನ, ಅಲ್ಲಿರುವ ಗುರುಗಳೇ ದೇವರುಗಳು ಅಲ್ಲಿ ವಿದ್ಯೆ ಕಲಿಯುವ ಮಕ್ಕಳೇ ಧನ್ಯರು. ಅಕ್ಷರ ಕಲಿತು ಮುಂದೆ ದೊಡ್ಡ ಅಧಿಕಾರಿಯಾಗಿ ಮರಳಿ ಶಾಲೆಯ ಕಡೆಗೆ ಬಂದು ಕಲಿತ ಶಾಲೆಯು ನಮಗೆ ಅನ್ನ ಅಕ್ಷರ ನೀಡಿದೆ. ಆ ಶಾಲೆಗಾಗಿ ನಾವು ಏನನ್ನಾದರೂ ಕೊಡೋಣ ಎಂಬ ಸಮಾಜಮುಖಿ ಭಾವನೆ ನಮ್ಮೆಲ್ಲರಲ್ಲೂ ಮೂಡಲಿ. ಶಾಲಾ ಅಭಿವೃದ್ಧಿಗೆ ನಮ್ಮದು ಒಂದು ಅಳಿಲು ಸೇವೆ ಸದಾ ಇರಲಿ. ಕಲಿತ ಶಾಲೆಯನ್ನು ಹಾಗೂ ಅಕ್ಷರ ನೀಡಿದ ಗುರುಗಳನ್ನು ಎಂದೆಂದಿಗೂ ಮರೆಯಬಾರದು . ನಮ್ಮ ಶಾಲೆಯ ಮೇಲೆ ನಮಗೆ ಅಭಿಮಾನವಿರಲಿ.

ಶಾಲೆಯು ವಿದ್ಯೆಧಾರೆಯೆರೆವ ದೇವಾಲಯ. ತಾಯಿ ನುಡಿಯ ಜೊತೆಗೆ ಇತರ ನುಡಿಗಳಿಗೆ ನಮನ ಈ ನುಡಿಗಳ ಮುಖಾಂತರ ಗಣಿತ, ವಿಜ್ಞಾನ, ಇತಿಹಾಸಗಳ ನಮನ. ಅಭ್ಯಾಸದ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ನಮ್ಮದೇ ದರ್ಬಾರು. ವಿಷಯಗಳ ಜೊತೆಗೆ ಶಿಕ್ಷಕರೇ ಇವುಗಳಿಗೆ ಗುರು ಇದು ಬರೀ ಶಾಲೆಯಲ್ಲ ಸಂಬಂಧಗಳ ನೆಲೆ ಜೊತೆಗೆ ಕೊಂಡೊಯ್ಯುವೆವು ಶಿಕ್ಷಕರಿಂದ ಪಡೆದ ಸ್ಪೂರ್ತಿಯ ಸೆಲೆ ಒಟ್ಟಿನಲ್ಲಿ ಇದು ನನ್ನ ಹೆಮ್ಮೆಯ ಶಾಲೆ.

# ದೈವಿಕ ವಾದ್ಯ ವೀಣೆ

■ **ಅಚಲ ಜಿ ಎಸ್** ವೈಣಿಕ ವಿದುಷಿ, ಹೊಸಪೇಟೆ


ಭಾರತೀಯ ವೀಣೆಯನ್ನು ಯಾವಾಗಲೂ ದೇವತೆಗಳ ಸಾಧನವೆಂದು ಪರಿಗಣಿಸಲಾಗಿದೆ. ಆದ್ದರಿಂದ ಅದಕ್ಕೆ 'ದೈವಿಕ ವಾದ್ಯ' ಎಂಬ ಹೆಸರನ್ನು ನೀಡಲಾಗಿದೆ. ಕಲೆ ಮತ್ತು ಕಲಿಕೆಯ ದೇವತೆಯಾದ ಸರಸ್ವತಿ ಸೇರಿದಂತೆ ಹಲವಾರು ಪ್ರಮುಖ ದೇವತೆಗಳಿಗೆ ವೀಣೆ ನೆಚ್ಚಿನ ವಾದ್ಯವಾಗಿದೆ. ಸರಸ್ವತಿಯು ಪುಸ್ತಕಧಾರಿಣಿ – ಆದ್ದರಿಂದ ವೀಣೆ ಮತ್ತು ಪುಸ್ತಕವಿಲ್ಲದೆ ಸರಸ್ವತಿಯ ಬಗ್ಗೆ ಯಾವುದೇ ಚಿತ್ರ, ಪ್ರತಿಮೆ ಅಥವಾ ಪುಸ್ತಕ ಪೂರ್ಣವಾಗುವುದಿಲ್ಲ.

**ಸರಸ್ವತಿ ದೇವತೆ ಅಷ್ಟೇ ಅಲ್ಲ:** ಪರಾಶಕ್ತಿ ದೇವಿ, ಮಾತಂಗಿ ದೇವಿ, ದಕ್ಷಿಣಾಮೂರ್ತಿಯೂ ಸಹ ವೀಣೆ ಹಿಡಿದಿರುವ ದೇವಸ್ಥಾನಗಳಿವೆ.

ವೀಣೆಯನ್ನು ಸಾಂಪ್ರದಾಯಿಕವಾಗಿ ಒಂದೇ ಮರದ ತುಂಡಿನಿಂದ ತಯಾರಿಸಲಾಗುತ್ತದೆ, ವಿಶಿಷ್ಟವಾಗಿ ಹಲಸಿನ ಮರದಿಂದ, ಇದು ಅದರ ಅನುರಣನ ಮತ್ತು ಬಾಳಿಕೆಗೆ ಹೆಸರುವಾಸಿಯಾಗಿದೆ. ಮರವನ್ನು ಅದರ ಧಾನ್ಯ ಮತ್ತು ಸಾಂದ್ರತೆಗಾಗಿ ಎಚ್ಚರಿಕೆಯಿಂದ ಆಯ್ಕೆ ಮಾಡಲಾಗುತ್ತದೆ ಮತ್ತು ವೀಣೆ ತಯಾರಿಸಲು ಬಳಸುವ ಮೊದಲು ಹಲವಾರು ವರ್ಷಗಳವರೆಗೆ ಹದಗೊಳಿಸಲಾಗುತ್ತದೆ.

ಭಾರತದ ವಿವಿಧ ಪ್ರದೇಶಗಳಲ್ಲಿ ನುಡಿಸಲಾಗುವ ಹಲವಾರು ರೀತಿಯ ವೀಣೆಗಳಿವೆ, ಪ್ರತಿಯೊಂದೂ ತನ್ನದೇ ಆದ ವಿಶಿಷ್ಟ ಗುಣಲಕ್ಷಣಗಳು ಮತ್ತು ನುಡಿಸುವ ತಂತ್ರಗಳನ್ನು ಹೊಂದಿದೆ. ವೀಣೆಯ ಕೆಲವು ಪ್ರಸಿದ್ಧ ಪ್ರಕಾರಗಳು

**ಹೀಗಿವೆ :**



**ರುದ್ರ ವೀಣೆ ಅಥವಾ ಗೊಟುವಾದ್ಯ:** ಇದು ವೀಣೆಯ ಅತ್ಯಂತ ಹಳೆಯ ರೂಪವಾಗಿದೆ ಮತ್ತು ಇದನ್ನು ದಕ್ಷಿಣ ಭಾರತದಲ್ಲಿ ನುಡಿಸಲಾಗುತ್ತದೆ. ಇದು ಆಳವಾದ ಮತ್ತು ಪ್ರತಿಧ್ವನಿಸುವ ಧ್ವನಿಯನ್ನು ಹೊಂದಿದೆ ಮತ್ತು ಅದರ ಸಂಕೀರ್ಣವಾಗಿ ನುಡಿಸುವ ಶೈಲಿಗೆ ಹೆಸರುವಾಸಿಯಾಗಿದೆ.

**ಸರಸ್ವತಿ ವೀಣೆ :** ಇದು ವೀಣೆಯ ಅತ್ಯಂತ ವ್ಯಾಪಕವಾಗಿ ಗುರುತಿಸಲ್ಪಟ್ಟ ರೂಪವಾಗಿದೆ ಮತ್ತು ದಕ್ಷಿಣ ಹಾಗೂ ಉತ್ತರ ಭಾರತದಲ್ಲಿ ನುಡಿಸಲಾಗುತ್ತದೆ. ಇದು 24 ಫ್ರೀಟ್‌ಗಳೊಂದಿಗೆ ಉದ್ದವಾದ ಕುತ್ತಿಗೆಯನ್ನು ಹೊಂದಿದೆ ಮತ್ತು ಸಾಮಾನ್ಯವಾಗಿ ಏಳು ಮುಖ್ಯ ತಂತಿಗಳು ಮತ್ತು ಮೂರು ಡ್ರೋನ್ ತಂತಿಗಳನ್ನು ಹೊಂದಿರುತ್ತದೆ. ಇದು ಸುಮಧುರ ಮತ್ತು ಹಿತವಾದ ಧ್ವನಿಗೆ ಹೆಸರುವಾಸಿಯಾಗಿದೆ.

**ಬೀನ್ :** ದ್ರುಪದ್ ಶೈಲಿಯ ಸಂಗೀತದಲ್ಲಿ ಬಳಸಲಾಗುವ ವೀಣೆಯ ಪ್ರಕಾರ. ಇದು ಸಹ ಪ್ರತಿಧ್ವನಿಸುವ ಧ್ವನಿಯನ್ನು ಹೊಂದಿದೆ.

**ಯಕ್ತರೊ:** ಇದು ಹವೇಲಿ ಸಂಗೀತ ಶೈಲಿಯ ಸಂಗೀತದಲ್ಲಿ ಬಳಸಲಾಗುವ ವೀಣೆಯ ಪ್ರಕಾರವಾಗಿದೆ. ಇದು ಪ್ರಕಾಶಮಾನವಾದ ಮತ್ತು ಉತ್ಸಾಹಭರಿತ ಧ್ವನಿಯನ್ನು ಹೊಂದಿದೆ ಮತ್ತು ವೇಗವಾಗಿ ನುಡಿಸುವ ತಂತ್ರಕ್ಕೆ ಹೆಸರುವಾಸಿಯಾಗಿದೆ.

**ಚಿತ್ರವೀಣೆ ಮತ್ತು ಹಾರ್ಪ್ ವೀಣೆ :** ಇದು ದಕ್ಷಿಣ ಭಾರತದಲ್ಲಿ ನುಡಿಸುವ ವೀಣೆಯ ಪ್ರಕಾರವಾಗಿದೆ. ಇದು ವಿಶಿಷ್ಟ ವಿನ್ಯಾಸವನ್ನು ಹೊಂದಿದೆ, ತಂತಿಗಳನ್ನು ಬಾಗಿದ ಸೇತುವೆಯ ಮೇಲೆ ವಿಸ್ತರಿಸಲಾಗಿದೆ.

ಸಂಗೀತ ವಾದ್ಯಗಳು ಮಾನಸಿಕ ಆರೋಗ್ಯಕ್ಕೆ ಒಳ್ಳೆಯದು ಮತ್ತು ಒತ್ತಡ, ಆತಂಕ ಮತ್ತು ಮುಂತಾದವುಗಳನ್ನು ಕಡಿಮೆ ಮಾಡಲು ಸಹ ಸಹಾಯ ಮಾಡುತ್ತದೆ. ತಾಳ್ಮೆಯನ್ನು ಹೆಚ್ಚಿಸಲು ವೀಣೆಯನ್ನು ಕಲಿಯುವುದು ಸಹ ಪ್ರಯೋಜನಕಾರಿಯಾಗಿದೆ. ಈ ಸಂಗೀತ ವಾದ್ಯವನ್ನು ಕಲಿಯುವುದರೊಂದಿಗೆ ಉತ್ತಮ ಶೈಕ್ಷಣಿಕ ಕಾರ್ಯಕ್ಷಮತೆಯ ನಡುವಿನ ಸಂಬಂಧವೂ ಇದೆ.

ಹೊಸ ಉದ್ದಿಮೆದಾರರಿಗೆ
ಸುವರ್ಣಾವಕಾಶ!
HAMPI TIMES VIJAYANAGARA
ಜಾಹೀರಾತು ಚಿಕ್ಕದಾದರೂ
ಬ್ರ್ಯಾಂಡಿಂಗ್ ಜಗದಗಲ

CLASSIFIEDS ADVERTISEMENTS

ಹಂಪಿ ಟೈಮ್ಸ್
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com
HAMPI TIMES

SPARES & SERVICES
PORTABLE COMPRESSORS
For Portable Diesel-driven Air Compressors ranging from 160 cfm - 1350 cfm, For Electrical Air Compressors ranging from 45kW - 75kW motors
Scan to Deatils
S M TRADERS & SERVICES
M:9686663125 - 9686663132 - 9686413132
Hampi Road, Hosapete-583201 Vijayanagara Dist.

ಮದುವೆ, ಗೃಹಪ್ರವೇಶ, ಶುಭ ಸಮಾರಂಭ, ಸಭೆ, ವಿವಿಧ ಧಾರ್ಮಿಕ ಕಾರ್ಯಕ್ರಮಗಳಿಗಾಗಿ ಭೇಟಿನೀಡಿ
ನೂತನವಾಗಿ ನವೀಕರಣಗೊಂಡ
ಶ್ರೀ ವೆಂಕಟೇಶ್ವರ ಕಲ್ಯಾಣ ಮಂಟಪ
ಪಟೇಲನಗರ, ಹೊಸಪೇಟೆ, ವಿಜಯನಗರ ಜಿಲ್ಲೆ
ಸ್ವಾತಿ ಸೌಂಡ್ಸ್ & ಡೆಕೋರೇಟರ್ಸ್
M:9448261804, 9742130982

॥ ಶ್ರೀ ಸಿದ್ಧಿವಿನಾಯಕ ಪ್ರಸನ್ನ ॥
ಕೇರಳ ಮಾಂತ್ರಿಕ ಜ್ಯೋತಿಷ್ಯರು
ಕೇರಳದ ಮಳಯಾಳ ಕುಟ್ಟಿಚಾತನ್ ಪದ್ಧತಿಯಿಂದ ಶೀಘ್ರ ಪರಿಹಾರ
9880956386
ವಿದ್ಯೇ ಉದ್ಯೋಗ, ಲೈಂಗಿಕ ಸಮಸ್ಯೆ, ಸ್ತ್ರೀ-ಪುರುಷ ಪ್ರೇಮವಿವಾಹಕ್ಕೆ ಯಂತ್ರ ಪೂಜೆ, ಮಾಟ-ಮಂತ್ರ ಸೇರಿದಂತೆ ಯಾವುದೇ ಸಮಸ್ಯೆಗಳಿದ್ದರೂ ಶೀಘ್ರ ಹಾಗೂ ಶಾಶ್ವತ ಪರಿಹಾರ ಶತಸಿದ್ಧ.
ಸಂಪರ್ಕಿಸಿರಿ: ಪಂ.ಪೊದುವಾಳ್ ಎಸ್.ಜಿ.ಅಣ್ಣಪ್ಪ ಕುಮಾರನ್, ಶ್ರೀಸಿದ್ಧಿವಿನಾಯಕ ದೇವಸ್ಥಾನ ಹತ್ತಿರ(ಮನೆ), ಹೊಸಪೇಟೆ, ವಿಜಯನಗರ ಜಿಲ್ಲೆ

ರೈತರಿಂದ ನೇರ ಮಾರಾಟ
ಸಾವಯವ ಪದ್ಧತಿಯಲ್ಲಿ ಬೆಳೆದ ಗುಣಮಟ್ಟದ ತೆಂಗಿನಕಾಯಿ, ಬಾಳೆಹಣ್ಣು, ದಾಳಿಂಬೆ ತಾಜಾ ನುಗ್ಗೇಕಾಯಿ ಮತ್ತು ನುಗ್ಗೆ ಸೊಪ್ಪಿಗಾಗಿ ಸಂಪರ್ಕಿಸಿ
Organic Coconut, Banana, Moringa Oleifera Available in Wholesale Best Price
M:98458 65204
Opp: Baldota Park, M.J.Nagara, Hosapete-583201 Vijayanagara Dist.

OM ENTERPRISES
Disposible Items Production & Wholesale
Available: Paper Tea Cup - Water Cup - Juice Cup - Bowl & Plate Etc.
M:94487 17137, 83109 88292
Chitrakeri, Hosapete-583201, Vijayanagara Dist.

VIVĒKASRĒYĀLĀPA
VEENA INSTRUMENTAL VOCAL - KARNATIC AND FILM MUSIC Classes
contact for more information
M:91082 26938, 90368 65666
Near Honda Showroom, Hosapete-583201

V N Royal Garden Function Hall
Hall is a Perfect suit for a meeting, Your Son & Daughters marriage, your child's birthday party, wedding reception or a business seminar.
This a best party place located in hosapet, Vijayanagara Dist.
WE ARE OPEN for Every Function
M:9980136034, 9880701217
Behind Meeralam Talkies, Hosapete-583201 Vijayanagara Dist.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

• Admissions
• Requirements
• Firm Branding
• Public Notice
• Change of Name

BOOK NOW!

Booking Open for Your Advertisements in Leading Local, State & National News Papers
9482599089 / 9448633038

• Obituary
• Remembrance
• Birthday wish ads
• Events Display &
• Classified ads

SHUBHA Ads C/o HAMPI TIMES, Bamboo Bazaar, Nr Valmiki Circle, Hosapete-583201 Vijayanagara Dist.

ನಿತ್ಯದ ಹಂಪಿ ಟೈಮ್ಸ್
ಇ–ಪತ್ರಿಕೆಗಾಗಿ
ಕೆಳಗಿನ ಗ್ರೂಪಿಗೆ ಸೇರಿರಿ

HAMPI TIMES (G-50)
WhatsApp group

## ನಿತ್ಯ ಪಂಚಾಂಗ

ಮಾಸ: ಫಾಲ್ಗುಣ । ಸಂವತ್ಸರ: ಶೋಭಾಕೃತ

**31–03–2024 – ಭಾನುವಾರ**

| | |
|---|---|
| ತಿಥಿ | : ಷಷ್ಠಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಜ್ಯೇಷ್ಠ |
| ಯೋಗ | : ವ್ಯತಾಪತಾ |
| ಕರಣ | : ಗರಜ |
| ಸೂರ್ಯೋದಯ | : 06:21:11 |
| ಸೂರ್ಯಾಸ್ತ | : 18:40:59 |
| ರಾಹು | : 17:09–18:41 |
| ಯಮಘಂಡ | : 12:31–14:04 |
| ಗುಳಿಕ | : 15:36–17:09 |

## ತುಂಗಭದ್ರಾ ನೀರಿನ ಮಟ್ಟ



ಶನಿವಾರ : 30–03–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1580.85 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 860 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 4.898 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1586.84 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 6536 ಕ್ಯುಸೆಕ್ |
| ಸಾಮರ್ಥ್ಯ | 8.588 ಟಿಎಂಸಿ |

## ಭೂತಾಯಿಯ ಮಡಿಲು ಸೇರಿದ ಅನಾಥರ ಆಶಾಕಿರಣ ರುದ್ರಮ್ಮ



**ಕೊಟ್ಟೂರು:** ಅನಾಥ ಮತ್ತು ವೃದ್ಧರ ರಕ್ಷಕಿ ಕೊಟ್ಟೂರಿನ ಅಮ್ಮ ಎಂದೇ ಪ್ರಖ್ಯಾತವಾಗಿರುವ ಉತ್ತಂಗಿ ರುದ್ರಮ್ಮ (83) ಶುಕ್ರವಾರ ನಿಧನರಾಗಿದ್ದರು.

ಸುಮಾರು 30 ವರ್ಷಗಳಿಂದ ತನ್ನ ಗಂಡನ ಪಿಂಚಣಿಯಿಂದ ರುದ್ರಮ್ಮ ಅನಾಥಶ್ರಮ ಸೇವಾ ಟ್ರಸ್ಟ್ ಸ್ಥಾಪಿಸಿ, ಅನೇಕ ಅನಾಥ, ವೃದ್ಧರು, ಅಂಗವಿಕಲರನ್ನು ಸಾಕಿದ್ದರು. ಇತ್ತೀಚೆಗೆ ಆರೋಗ್ಯದಲ್ಲಿ ಏರುಪೇರಾಗಿತ್ತು, ಶುಕ್ರವಾರ 1 ಗಂಟೆಯ ಸಮಯದಲ್ಲಿ ಇಹಲೋಕ ತ್ಯಜಿಸಿದರು.

ಇವರ ಆಶ್ರಯದಲ್ಲಿದ್ದ 16 ಜನ ಅನಾಥರು, ವೃದ್ಧರು, ಅಂಗವಿಕಲರಿಗೆ ದಿಕ್ಕು ತೋಚದಂತಾಗಿದ್ದು, ಕಂಬನಿ ಮಿಡಿದಿದ್ದಾರೆ. ಇವರ ನಿಸ್ವಾರ್ಥ ಸೇವೆ ಪರಿಗಣಿಸಿ ಅನೇಕ ಪ್ರಶಸ್ತಿಗಳು ಲಭಿಸಿವೆ. ಇವರ ಹೋರಾಟ ಬದುಕಿನ ಜೀವನದ ಹಿನ್ನೆಲೆಯೂ ನಾಟಕವಾಗಿ ಪ್ರದರ್ಶನಗೊಂಡಿದೆ. ಲೇಖಕ ಉಜ್ಜಿನಿ ರುದ್ರಪ್ಪ ಅಮ್ಮ ಎಂಬ ಪುಸ್ತಕವನ್ನು ಇವರ ರಚಿಸಿ ಹೊರ ತಂದಿದ್ದಾರೆ.

ಇವರ ಅಗಲಿಕೆಗೆ ಅನೇಕ ಮುಖಂಡರು ಮತ್ತು ಸಂಘಟನೆಗಳು ಕಣ್ಣೀರಿಟ್ಟಿವೆ. ಇವರ ಅಂತ್ಯ ಸಂಸ್ಕಾರವನ್ನು ಶನಿವಾರ ಪಟ್ಟಣದ ವೀರಶೈವ ರುದ್ರಭೂಮಿಯಲ್ಲಿ ಜಂಗಮರ ಧಾರ್ಮಿಕ ವಿಧಿ ವಿಧಾನಗಳಂತೆ ಶಾಸ್ತ್ರೋಕ್ತವಾಗಿ ನೆರವೇರಿತು.

# ವಲಸೆ ಯಾಕ್ರಿ ನಿಮ್ಮೂರಲ್ಲೇ ಉದ್ಯೋಗ

## ದಿನಗೂಲಿ ರೂ.316 ರಿಂದ ರೂ.349 ರ ವರೆಗೆ ಹೆಚ್ಚಳ

### ಏ.1 ರಿಂದ ಮೇ ಅಂತ್ಯದವರೆಗೆ ಪ್ರತಿ ಗ್ರಾಪಂಗಳಲ್ಲಿ ಕನಿಷ್ಟ 500 ರಿಂದ 13200 ಕೂಲಿಕಾರರಿಗೆ ಕೆಲಸ

**■ ಹಂಪಿ ಟೈಮ್ಸ್ ಬಳ್ಳಾರಿ**

ತಾಲೂಕಿನಲ್ಲಿ 25 ಗ್ರಾಮ ಪಂಚಾಯತಿಗಳಲ್ಲಿ 10 ದಿನಗಳ ಕಾಲ "ವಲಸೆ ಯಾಕ್ರಿ ನಿಮ್ಮೂರಲ್ಲೇ ಉದ್ಯೋಗ ಖಾತರಿ" ಅಭಿಯಾನ ನಡೆಸಲಾಗಿದ್ದು, ಬೇಡಿಕೆಯನುಸಾರ ಕೂಲಿಕಾರರಿಗೆ 2024–25 ನೇ ಸಾಲಿಗೆ ದಿನಕ್ಕೆ ರೂ.316 ರಿಂದ ರೂ.349 ರ ವರೆಗೆ ದಿನಕೂಲಿ ಹೆಚ್ಚಿಸಲಾಗಿದೆ ಎಂದು ಬಳ್ಳಾರಿ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಮಡಗಿನ ಬಸಪ್ಪ ಅವರು ತಿಳಿಸಿದ್ದಾರೆ.

ತಾಲ್ಲೂಕಿನ ಸಹಾಯಕ ನಿರ್ದೇಶಕರು (ಗ್ರಾಉ), ಐಇಸಿ ಸಂಯೋಜಕರು, ತಾಂತ್ರಿಕ ಸಂಯೋಜಕರು ಮತ್ತು ತಾಲೂಕು ಎಂಐಎಸ್ ಸಂಯೋಜಕರು ಪ್ರತಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಮೇಟಿಗಳ ಸಭೆ ಮಾಡಿ ಮೇಟಿಗಳ ಕರ್ತವ್ಯಗಳು, ಜವಾಬ್ದಾರಿಗಳು ಕೂಲಿಕಾರರ ಬೇಡಿಕೆ ಮತ್ತು ಕೆಲಸದ ಸ್ಥಳಗಲ್ಲಿ ದೊರೆಯುವ ಸೌಲಭ್ಯಗಳ ಕುರಿತು ಮಾಹಿತಿ ನೀಡಿದ್ದಾರೆ.

ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ತಾಲೂಕು



ಐಇಸಿ ತಂಡ ಮತ್ತು ಗ್ರಾಮ ಪಂಚಾಯತಿಯ ತಂಡಗಳಿಂದ ಪ್ರತಿ ಕುಟುಂಬಗಳನ್ನು ಸಂಪರ್ಕಿಸಿ ಮಹಾತ್ಮ ಗಾಂಧಿ ನರೇಗಾ ಯೋಜನೆಯ ಬಗ್ಗೆ ಮಾಹಿತಿ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಏಪ್ರೀಲ್ ಮತ್ತು ಮೇ ತಿಂಗಳಲ್ಲಿ ಮಾನವ ದಿನಗಳ ಸೃಜನೆಗೆ ಬೇಕಾಗುವಷ್ಟು ಕೂಲಿಕಾರರಿಂದ ಮತ್ತು ಮೇಟಿಗಳಿಂದ ನಿಗದಿತ ನಮೂನೆಯಲ್ಲಿ ಗ್ರಾಮ ಪಂಚಾಯತಿಗಳಿಂದ 12450 ಕೂಲಿಕಾರ್ಮಿಕರಿಂದ ಕೆಲಸಕ್ಕಾಗಿ ಬೇಡಿಕೆ ಪಡೆಯಲಾಗಿದೆ ಎಂದು ತಿಳಿಸಿದ್ದಾರೆ.

ಕೂಲಿಕಾರರು ಸಲ್ಲಿಸಿದ ಬೇಡಿಕೆಗೆ ಅನುಸಾರ ಅಂದಾಜು ಪಟ್ಟಿ ತಯಾರಿಕೆ, ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿಗಳನ್ನು ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಏಪ್ರಿಲ್ 1 ರಿಂದ ಮೇ ಅಂತ್ಯದವರೆಗೆ ಪ್ರತಿ ಗ್ರಾಮ ಪಂಚಾಯತಿಗಳಲ್ಲಿ ಕನಿಷ್ಟ 500 ರಿಂದ 13200 ಕೂಲಿಕಾರರಿಗೆ ಕೆಲಸ ನೀಡಲು ಎನ್‌ಎಂಆರ್‌ಗಳನ್ನು ರೂಪಿಸಲಾಗಿದೆ.

ಸಮುದಾಯಿತ ಕಾಮಗಾರಿಗಳಾದ ಕೆರೆ, ಕಾಲುವೆ, ನಾಲಾ ಮತ್ತು ಚೆಕ್‌ಡ್ಯಾಂ ಗಳಲ್ಲಿ ಹೂಳು ತೆಗೆಯುವ ಕಾಮಗಾರಿಗಳನ್ನು ಪ್ರಾರಂಭಿಸಲಾಗುತ್ತದೆ. ವೈಯಕ್ತಿಕ ಕಾಮಗಾರಿಗಳಾದ ಬದು, ಕೃಷಿ ಹೊಂಡ, ತೋಟಗಾರಿಕೆ ಬೆಳೆಗಳು, ದನದ ಕೊಟ್ಟಿಗೆ ಮತ್ತು ಕುರಿ ಕೊಟ್ಟಿಗೆಗಳನ್ನು ಮಾಡಿಕೊಳ್ಳಬಹುದಾಗಿದೆ.

ವಿಶೇಷಚೇತರಿಗೂ ನರೇಗಾ ಯೋಜನೆಯಡಿ ಕೂಲಿ ಕೆಲಸ ನೀಡಲಾಗುತ್ತಿದೆ. ಬೇಸಿಗೆ ಕಾಲದಲ್ಲಿ ನಿರಂತರವಾಗಿ ದುಡಿಯುವ ಕೈಗಳಿಗೆ ಗ್ರಾಮ ಪಂಚಾಯತಿಗಳಲ್ಲಿ ಕೆಲಸ ನೀಡುವಂತೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

# ಹಿಂಗಾರು ರಾಗಿಗೂ ಬೆಂಬಲ ಬೆಲೆ ನೀಡಿ: ರೈತರ ಆಗ್ರಹ



**■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಹಿಂಗಾರಿನಲ್ಲಿ ಬೆಳೆದ ರಾಗಿಗೂ ಬೆಂಬಲ ಬೆಲೆಯಲ್ಲಿ ಖರೀದಿಸುವಂತೆ ಆಗ್ರಹಿಸಿ ರೈತರು ತಹಸೀಲ್ದಾರ್ ಮೂಲಕ ರಾಜ್ಯದ ಮುಖ್ಯಮಂತ್ರಿಗೆ ಶನಿವಾರ ಮನವಿ ಪತ್ರ ಸಲ್ಲಿಸಿದರು.

ತಾಲೂಕು ಆಡಳಿತ ಸೌಧದ ಬಳಿಗೆ ತೆರಳಿದ ರೈತ ಮುಖಂಡರು, ತಹಸೀಲ್ದಾರ್ ಚಂದ್ರಶೇಖರ್ ಶಂಭಣ್ಣ ಗಾಳಿಯವರಿಗೆ ಮನವಿಪತ್ರ ಸಲ್ಲಿಸಿದ ಬಳಿಕ, ರೈತರ ಪರವಾಗಿ ಮುಖಂಡ ಮೈನಳ್ಳಿ ಕೊಟ್ರೇಶಪ್ಪ ಮಾತನಾಡಿ, ರಾಗಿ ಖರೀದಿ ಕೇಂದ್ರದಲ್ಲಿ ರಾಗಿ ಖರೀದಿಸುವಲ್ಲಿ ತಾರತಮ್ಯವಾಗುತ್ತಿದೆ. ಕೇವಲ ಮುಂಗಾರು ಬೆಳೆಯಲ್ಲಿ ಬೆಳೆದ ರಾಗಿಯನ್ನು ಮಾತ್ರ ಖರೀದಿಸುವುದರಿಂದ, ಹಿಂಗಾರಿನಲ್ಲಿ ಬೆಳೆದ ರೈತರಿಗೆ ಅನ್ಯಾಯವಾಗುತ್ತಿದೆ ಎಂದು ಆರೋಪಿಸಿದರು.

ಸರ್ಕಾರ ರೈತರ ವಿಷಯದಲ್ಲಿ ಮುಂಗಾರು, ಹಿಂಗಾರು ಬೆಳೆಗಳ ರೈತರೆಂದು ವಿಂಗಡಿಸದೇ ಎಲ್ಲರನ್ನು ಸಮಾನತೆಯಿಂದ ನೋಡುವಂತಾಗಬೇಕು ಎಂದರು. ಈಗಾಗಲೇ ಬರಗಾಲದ ಬೇಗೆಯಲ್ಲಿ ಬೆಂದಿರುವ ರೈತರು ಸಾಲದ ಸುಳಿಯಲ್ಲಿ ನರಳಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಹಿಂಗಾರಿನಲ್ಲಿ ಬೆಳೆದ ರಾಗಿ ಬೆಳೆಗೂ ಖರೀದಿ ಕೇಂದ್ರದಲ್ಲಿ ಬೆಂಬಲ ಬೆಲೆಯಲ್ಲಿಯೇ ಖರೀದಿಸುವಂತೆ ಸಂಬಂಧಿಸಿದ ಸಚಿವರಿಗೆ ಮುಖ್ಯಮಂತ್ರಿಗಳು ಆದೇಶಿಸಬೇಕು ಎಂದರು. ಇದಲ್ಲದೆ, ಪ್ರಮುಖವಾಗಿ ಮುಂಗಾರು ರಾಗಿ ಬೆಳೆಯನ್ನು ಖರೀದಿಸುವ ನೊಂದಾವಣೆಯ ದಿನಾಂಕವನ್ನು ವಿಸ್ತರಿಸಬೇಕು ಎಂದು ಆಗ್ರಹಿಸಿದರು.

ಈ ವೇಳೆ ರಾಜ್ಯ ರೈತ ಸಂಘದ ತಾಲೂಕು ಉಪಾಧ್ಯಕ್ಷ ಎಂ.ಸೋಮಪ್ಪ, ಬನ್ನಿಗೋಳ ವೆಂಕಣ್ಣ, ಎನ್.ಎಂ.ಸಿದ್ದೇಶ, ಸುಭಾಷ್, ಬೇತೂರ್ ರವಿ, ನಾಗರಾಜಪ್ಪ, ಎಂ.ಹನುಮಂತಪ್ಪ, ಎಂ.ರುದ್ರಪ್ಪ, ಸಿ.ಕೊಟ್ರೇಶ, ಎ.ಪ್ರಕಾಶ್, ಎನ್.ಮಂಜುನಾಥ ಮತ್ತಿತರರು ಇದ್ದರು.

# ಭದ್ರಾದಿಂದ ತುಂಗಭದ್ರಾ ನದಿಗೆ ನೀರು

## ಏ.6ರವರೆಗೆ ಪ್ರತಿದಿನ 3000 ಕ್ಯೂಸೆಕ್ಸ್, ಒಟ್ಟು 2 ಟಿ.ಎಂ.ಸಿ ನೀರು

**■ ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲೆಯಲ್ಲಿ ಕುಡಿಯುವ ನೀರಿನ ಅಭಾವವಿರುವುದರಿಂದ ವಿವಿಧ ಕುಡಿಯುವ ಯೋಜನೆಗಳಿಗಾಗಿ ಭದ್ರಾ ಜಲಾಶಯದಿಂದ ತುಂಗಭದ್ರಾ ನದಿಗೆ ನೀರು ಹರಿಸುತ್ತಿದ್ದು, ಅನಧಿಕೃತ ಪಂಪಸೆಟ್‌ಗಳ ಮೂಲಕ ನೀರೆತ್ತುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ಭದ್ರಾ ಜಲಾಶಯದಿಂದ ತುಂಗಭದ್ರಾ ನದಿಗೆ ಮಾರ್ಚ್ 29ರ ರಾತ್ರಿಯಿಂದಲೇ ಏಪ್ರಿಲ್ 6ರವರೆಗೆ ಪ್ರತಿದಿನ 3000 ಕ್ಯೂಸೆಕ್ಸ್, ಏ. 6ರಂದು 2200 ಕ್ಯೂಸೆಕ್ಸ್ ಸೇರಿ ಒಟ್ಟು 2 ಟಿ.ಎಂ.ಸಿ ನೀರು ಹರಿಸಲು ಅನುಮತಿ ನೀಡಿ ಆದೇಶವಾಗಿದೆ.

**ಸಾರ್ವಜನಿಕರಿಗೆ ಸೂಚನೆ:** ಸಾರ್ವಜನಿಕ ದೂರುಗಳ ಹಿನ್ನೆಲೆಯಲ್ಲಿ ನದಿ ದಂಡೆಯಲ್ಲಿ ಅಳವಡಿಸಿರುವ ಅನಧೀಕೃತ ಪಂಪ್‌ಸೆಟ್‌ಗಳಿಂದ ನೀರೆತ್ತುವುದನ್ನು ನಿಷೇಧಿಸಲಾಗಿದೆ. ಹಾಗೂ ಈ ಅವಧಿಯಲ್ಲಿ ನದಿ ಪಾತ್ರದಲ್ಲಿ ಸಾರ್ವಜನಿಕರು ತಿರುಗಾಡುವುದಾಗಲೀ, ಜನರು ಮತ್ತು ದನಕರುಗಳನ್ನು ನದಿಗೆ ಇಳಿಸುವುದಾಗಲಿ ಹಾಗೂ ನಿರ್ಮಾಣ ಕಾಮಗಾರಿಗಳನ್ನು ನದಿಯಲ್ಲಿ ನಡೆಸುತ್ತಿರುವುದು ಇತ್ಯಾದಿ ಚಟುವಟಿಕೆಗಾಗಿ ನದಿಗೆ ಇಳಿಯದಂತೆ ಸೂಚಿಸಲಾಗಿದೆ. ಇದನ್ನರಿತು ಸಾರ್ವಜನಿಕರು ಇಲಾಖೆಯೊಂದಿಗೆ ಸಹಕರಿಸಬೇಕು ಎಂದು ಕರ್ನಾಟಕ ನೀರಾವರಿ ನಿಗಮದ ಅಧೀಕ್ಷ ಅಭಿಯಂತರರು ಹಾಗೂ ಭದ್ರ ಜಲಾಶಯ ಯೋಜನೆಯ ಕುಡಿಯುವ ನೀರಿನ ಸಮಿತಿಯ ಸದಸ್ಯ ಕಾರ್ಯದರ್ಶಿ ತಿಳಿಸಿದ್ದಾರೆ.

# ವಾರ್ತಾ ಇಲಾಖೆ ನೂತನ ಆಯುಕ್ತರಾಗಿ ಸೂರಳ್ಕರ್ ವಿಕಾಸ್ ಕಿಶೋರ್

**■ ಹಂಪಿ ಟೈಮ್ಸ್ ಹೊಸಪೇಟೆ**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನೂತನ ಆಯುಕ್ತರಾಗಿ 2012ರ ಐಎಎಸ್ ಬ್ಯಾಚ್ ನ ಸೂರಳ್ಕರ್ ವಿಕಾಸ್ ಕಿಶೋರ್ ಅವರನ್ನು ನೇಮಿಸಿ ಸರಕಾರ ಆದೇಶ ಹೊರಡಿಸಿದೆ.



ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ಗಮಿತ ಆಯುಕ್ತ ಹೇಮಂತ್ ನಿಂಬಾಳ್ಕರ್ ಅವರು ನೂತನ ಆಯುಕ್ತ ಸೂರಳ್ಕರ್ ವಿಕಾಸ್ ಕಿಶೋರ್ ಅವರಿಗೆ ಶನಿವಾರ ಸಂಜೆ ಅಧಿಕಾರ ಹಸ್ತಾಂತರಿಸಿದರು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ವಿಭಾಗದ ವಿಶೇಷ ಆಯುಕ್ತರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸೂರಳ್ಕರ್ ವಿಕಾಸ್ ಕಿಶೋರ್ ಅವರನ್ನು ಸರಕಾರ ಶನಿವಾರ ಸಂಜೆ ನೇಮಿಸಿದ್ದು, ನೂತನ ಆಯುಕ್ತರು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹುದ್ದೆಗೆ ಜೊತೆಗ ಬಿಬಿಎಂಪಿ ವಿಶೇಷ ಆಯುಕ್ತರ ಸಮವರ್ತಿತ ಹುದ್ದೆಯಲ್ಲಿಯೂ ಮುಂದುವರಿಯಲಿದ್ದಾರೆ.

ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತರುವುದರ ಮೂಲಕ ರಾಜ್ಯದಲ್ಲಿ ಹೆಸರುವಾಸಿಯಾಗಿದ್ದ ಸೂರಳ್ಕರ್ ವಿಕಾಸ್ ಕಿಶೋರ್ ಅವರು ಕೊಪ್ಪಳದಲ್ಲಿ ಜಿಲ್ಲಾಧಿಕಾರಿಗಳಾಗಿ, ಯಾದಗಿರಿ, ಬೆಳಗಾವಿ, ವಿಜಯಪುರ ಜಿಲ್ಲೆಗಳಲ್ಲಿ ಜಿಪಂ ಸಿಇಓ ಅವರಾಗಿ ಕರ್ತವ್ಯ ನಿರ್ವಹಿಸಿದ್ದಾರೆ.

# ಯುವಜನರು ಮತದಾನ ಹಕ್ಕು ಚಲಾಯಿಸಿ

## ಜಿಲ್ಲಾ ಪಂಚಾಯಿತಿ ಸಿಇಓ ಬಿ.ಸದಾಶಿವ ಪ್ರಭು ಸಲಹೆ । ಸಹಿ ಅಭಿಯಾನ

**■ ಹಂಪಿ ಟೈಮ್ಸ್ ಹೊಸಪೇಟೆ**

ಇಡೀ ಪ್ರಪಂಚದಲ್ಲಿ ಹೆಚ್ಚು ಯುವ ಸಮೂಹ ಇರುವುದು ಭಾರತದಲ್ಲಿ, ಹೀಗಾಗಿ ಉತ್ತಮ ಸಮಾಜಕ್ಕಾಗಿ ಯುವ ಮತದಾರರು ಮತ ಹಾಕುವುದನ್ನು ಮರೆಯಬಾರದು ಎಂದು ವಿದ್ಯಾರ್ಥಿಗಳಿಗೆ ಜಿಪಂ ಸಿಇಓ ಬಿ.ಸದಾಶಿವ ಪ್ರಭು ಹೇಳಿದರು.

ಇಲ್ಲಿನ ನ್ಯಾಷನಲ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ತಾಲೂಕು ಹಾಗೂ ಜಿಲ್ಲಾಡಳಿತ, ತಾಲೂಕು ಹಾಗೂ ಜಿಲ್ಲಾ ಪಂಚಾಯತ್, ನಗರಸಭೆ ಆಶ್ರಯದಲ್ಲಿ ಲೋಕಸಭಾ ಸಾರ್ವತ್ರಿಕ ಚುನಾವಣೆ–2024ರ ಪ್ರಯುಕ್ತ ಶನಿವಾರ ಹಮ್ಮಿಕೊಂಡಿದ್ದ ಮತದಾರರ ಸಹಿ ಸಂಗ್ರಹಣಾ ಅಭಿಯಾನ ಹಾಗೂ ಮತದಾನ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಲೋಕಸಭಾ ಸಾರ್ವತ್ರಿಕ ಚುನಾವಣೆ ಇರುವುದರಿಂದ ಕಡ್ಡಾಯ ಮತದಾನ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ನಮ್ಮ ಭಾರತ ದೇಶವು ಇಡೀ ಪ್ರಪಂಚದಲ್ಲೇ



ಅತೀದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿದ್ದು, ಆದರೆ, ಮತದಾನ ಮಾಡುವಲ್ಲಿ ಜನರು ನಿರ್ಲಕ್ಷ್ಯ ತೋರುತ್ತಿರುವುದು ಬೇಸರದ ಸಂಗತಿ. ದೇಶದಲ್ಲಿ ಸಾಕಷ್ಟು ವಿದ್ಯಾವಂತರೇ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸುತ್ತಿಲ್ಲ. ಆದ್ದರಿಂದ 18 ವರ್ಷ ಮೇಲ್ಪಟ್ಟ ಯುವಜನತೆ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಬೇಕು ಹಾಗೂ ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡಬೇಕು. ಇಂದಿನ ಯುವ ಪೀಳಿಗೆ ಮತದಾನದಿಂದ ದೂರ ಉಳಿಯಬಾರದು ಎಂದರು. ಪ್ರಜ್ಞಾವಂತರು ಹಾಗೂ ವಿದ್ಯಾವಂತರೇ ಮತದಾನ ದಿನದಂದು ಬೇರೊಂದು ಊರುಗಳಿಗೆ ಪ್ರವಾಸ ಕೈಗೊಳ್ಳುತ್ತಾರೆ. ಇದು ಸರಿಯಲ್ಲ. ವಿದ್ಯಾವಂತರಾದವರು ತಪ್ಪು ಮಾಡುವುದು ಸರಿಯಲ್ಲ. ಆದ್ದರಿಂದ ಯುವಕರಿಂದ ಸಮಾಜಕ್ಕೆ ಉತ್ತಮ ಸಂದೇಶ ಹೋಗಬೇಕಾದರೆ ಎಲ್ಲರೂ ಕಡ್ಡಾಯ ಮತದಾನ ಮಾಡಿ ಪ್ರಜಾಪ್ರಭುತ್ವ ಹಬ್ಬವನ್ನು ಆಚರಿಸಿ ಯಶಸ್ವಿಗೊಳಿಸಬೇಕು ಎಂದು ಕಿವಿಮಾತು ಹೇಳಿದರು.

ನಗರದ ಶ್ರೀಶಂಕರ್‌ಆನಂದ್ ಸಿಂಗ್ ಪ್ರಥಮ ದರ್ಜೆ ಕಾಲೇಜ್ ಹಾಗೂ ವಿಜಯನಗರ ಪದವಿ ಕಾಲೇಜ್‌ನಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.ಈ ಸಂದರ್ಭದಲ್ಲಿ ನ್ಯಾಷನಲ್ ಬಿ.ಇಡಿ ಶಿಕ್ಷಣ ಮಹಾವಿದ್ಯಾಲಯ ಪ್ರಾಚಾರ್ಯ ಡಾ.ಅಯ್ಯುಬ್‌ಖಾನ್, ಕಾಲೇಜಿನ ಕಾರ್ಯದರ್ಶಿ ಕಾಕುಬಾಳು ಶ್ರೀನಿವಾಸ ಸೇರಿದಂತೆ ನಗರಸಭೆ ಆಯುಕ್ತರು, ಕಾಲೇಜು ಸಿಬ್ಬಂದಿ, ವಿದ್ಯಾರ್ಥಿಗಳು ಇತರರು ಇದ್ದರು.

# ಏ.1ರಿಂದ ಕಾಲುಬಾಯಿ ರೋಗ ಲಸಿಕಾ ಅಭಿಯಾನ

**■ಹಂಪಿ ಟೈಮ್ಸ್ ಹೊಸಪೇಟೆ**

2024–25ನೇ ಸಾಲಿನ ಐದನೇ ಸುತ್ತಿನಾ ಕಾಲುಬಾಯಿ ರೋಗ ಲಸಿಕಾ ಅಭಿಯಾನ ಏ. 1ರಿಂದ ಆರಂಭವಾಗಲಿದ್ದು, ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಪಟ್ಟಣ ಪ್ರದೇಶ ಮತ್ತು 45 ಗ್ರಾಮಗಳಲ್ಲಿನ ಜಾನುವಾರುಗಳಿಗೆ ಕಾಲುಬಾಯಿ ಲಸಿಕೆ ಉಚಿತವಾಗಿ ಲಸಿಕೆ ಹಾಕಲಿದ್ದು, ರೈತ ಬಾಂಧವರು ಲಸಿಕೆ ಹಾಕಿಸಲು ಸಹಕಾರ ನೀಡಬೇಕು ಎಂದು ಪಶುವೈದ್ಯಕೀಯ ಸೇವಾ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿರುತ್ತಾರೆ.

# ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರಕ್ಕೆ ಡಿಸಿ ದಿವಾಕರ ಭೇಟಿ ಪರಿಶೀಲನೆ

**■ ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಧಿಕಾರಿಗಳಾದ ಎಂ.ಎಸ್. ದಿವಾಕರ ಅವರು ಮಾರ್ಚ 30ರಂದು ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ನಗರದ ಬಾಲಕೀಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿದ ವೇಳೆ ಅಲ್ಲಿನ ಪರೀಕ್ಷಾ ವ್ಯವಸ್ಥೆಯ ಬಗ್ಗೆ ಮಾಹಿತಿ ಪಡೆದರು.

ವಿಜ್ಞಾನ ವಿಷಯದ ಪರೀಕ್ಷೆ: ಮಾರ್ಚ 30ರಂದು ನಡೆದ ವಿಜ್ಞಾನ ವಿಷಯದ ಪರೀಕ್ಷೆಗೆ ಒಟ್ಟು 20,419 ವಿದ್ಯಾರ್ಥಿಗಳು ಹಾಜರಾಗಿದ್ದರು. 337 ವಿದ್ಯಾರ್ಥಿಗಳು ಗೈರಾಗಿದ್ದರು. ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ 2784, ಹೊಸಪೇಟೆ ತಾಲೂಕಿನಲ್ಲಿ



5898, ಹೂವಿನಹಡಗಲಿ ತಾಲೂಕಿನಲ್ಲಿ 2943, ಕೂಡ್ಲಿಗಿ ತಾಲೂಕಿನಲ್ಲಿ 4651 ಹಾಗೂ ಹರಪನಹಳ್ಳಿ ತಾಲ್ಲೂಕಿನಲ್ಲಿ 4143 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

**■ ಹಂಪಿ ಟೈಮ್ಸ್ ಹೊಸಪೇಟೆ**



ಜೆಸ್ಕಾಂ ಕಮಲಾಪುರದ 110/11ಕೆ.ವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಪ್ರಯುಕ್ತ ಮಾರ್ಚ್ 31 ರಂದು ಬೆಳಿಗ್ಗೆ 8 ರಿಂದ ಸಂಜೆ 4 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಅಂದು ಕಮಲಾಪುರ ಶಾಖಾ ವ್ಯಾಪ್ತಿಗೆ ಬರುವ ಕಮಲಾಪುರ ಪಟ್ಟಣ ಪಂಚಾಯಿತಿ, ಬುಕ್ಕಸಾಗರ ಗ್ರಾಮ ಪಂಚಾಯಿತಿ, ಸೀತರಾಮ ತಾಂಡ ಗ್ರಾಮ ಪಂಚಾಯಿತಿ, ಮಲಪನಗುಡಿ ಗ್ರಾಮ ಪಂಚಾಯಿತಿ, ಹಂಪಿ ಗ್ರಾಮ ಪಂಚಾಯಿತಿ, ಪಾಪಿನಾಯಕನಹಳ್ಳಿ ಗ್ರಾಮ ಪಂಚಾಯಿತಿ, ಗಾದಿಗನೂರು ಗ್ರಾಮ ಪಂಚಾಯಿತಿ ಮತ್ತು ಬೈಲುವದ್ದಿಗೇರೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಗ್ರಾಮಗಳಿಗೆ ಹಾಗೂ ನೀರಾವರಿ ಪಂಪ್ ಸೆಟ್ ರೈತರಿಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಸಾರ್ವಜನಿಕರು ಹಾಗೂ ರೈತ ಬಾಂಧವರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.






Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA